info@buntsanghablr.com
buntsanghabangalore@yahoo.in

# ಸ್ನೇಹ ಚಿರಂತನೆ

ಮಾಸ ಪತ್ರಿಕೆ

ಏಪ್ರಿಲ್ 2025
ಸಂಪುಟ 21 ಸಂಚಿಕೆ 4

ಸಂಚಿಕೆ ಬೆಲೆ ರೂ. 1/-




ವಿವಾಹ ವೇದಿಕೆ ಮತ್ತು ಕಾನೂನು ವಿಭಾಗದ ವತಿಯಿಂದ ಜೀವನ ಜೋಕಾಲಿ ವಧು-ವರರ ಸಮಾವೇಶ







ಮಹಿಳಾ ವಿಭಾಗದ ವತಿಯಿಂದ ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆ "ಭವತೀ"



ಹೆಬ್ಬೇರಿ ಬಂಟ ರತ್ನ ಪ್ರಶಸ್ತಿಯನ್ನು ಸ್ವೀಕರಿಸಿದ ನಮ್ಮ ಸಂಘದ ಅಧ್ಯಕ್ಷರಾದ ಸಿಎ. ಅಶೋಕ್ ಶೆಟ್ಟಿ ಎಂ. ರವರು

ಬಂಟರ ಸಂಘ ಬೆಂಗಳೂರು
BUNTS' SANGHA BANGALORE

# 324, Bunts' Sangha Complex, Chord Road,
Vijayanagar, Bengaluru - 560040. Karnataka.
Phone : 080-23399323 | 23399636
Email : info@buntsanghablr.com


REGAL
JEWELLERS
MANUFACTURER
& WHOLESALERS
Bengaluru's First
Wholesale Jewellery Destination
Now in
Kammanahalli
Opening shortly in
Malleshwaram
ADVT.
WHOLESALE PRICING
100% 916 HUID HALLMARKED
INTERNATIONAL CERTIFIED DIAMONDS
100% VALUE ON EXCHANGE
FOR UPDATES
+91 8720 90 90 90
care@regaljewellers.net
www.regaljewellers.net
KARNATAKA | KERALA

# ಸ್ನೇಹ ಚಿಂತನೆ

*Monthly Magazine Published by*

## BUNTS' SANGHA BANGALORE

VOL 21 APRIL - 2025 ISSUE 4

**ಸಾಹಿತ್ಯ ಪ್ರಕಾಶನ ಸಮಿತಿ**
ಚೇರ್‌ಪರ್ಸನ್ ಮತ್ತು ಗೌರವ ಸಂಪಾದಕರು:
ಶ್ರೀ ರವೀಂದ್ರ ಶೆಟ್ಟಿ ಹಟ್ಟಿಯಂಗಡಿ

**ಸಹ ಸಂಪಾದಕರು:**
ಶ್ರೀ ದೀಪಕ್ ಜೆ. ಶೆಟ್ಟಿ

**ಗೌರವ ಸಲಹೆಗಾರರು:**
ಶ್ರೀ ಎಂ. ಮುರಲೀಧರ ಹೆಗ್ಡೆ
ಶ್ರೀ ಬಾಲಕೃಷ್ಣ ಶೆಟ್ಟಿ (ಎಬಿ ಶೆಟ್ಟಿ)
ಡಾ. ದೀಪಕ್ ಶೆಟ್ಟಿ

**ಸಂಪಾದಕೀಯ ಮಂಡಳಿ**
ಶ್ರೀಮತಿ ನಿರ್ಮಲ ಸಿ. ರೈ
ಶ್ರೀ ಪ್ರಸಾದ್ ಶೆಟ್ಟಿ ಸೀತಾನದಿ
ಶ್ರೀಮತಿ ಸ್ಮಿತಾ ಬಲ್ಲಾಳ್
ಶ್ರೀ ಸತೀಶ್ ಶೆಟ್ಟಿ ವಕ್ವಾಡಿ
ಶ್ರೀ ಸಂದೀಪ್ ಹೆಗ್ಗದ್ದೆ
ಶ್ರೀಮತಿ ಶ್ಯಾಮಲ ಶೆಟ್ಟಿ

**ಪತ್ರಿಕಾ ಸಲಹಾ ವಿಭಾಗ:**
ಸಮಾಜ ಸೇವೆ ವಿಭಾಗ: ಶ್ರೀ ಜಯರಾಮ ಶೆಟ್ಟಿ ನೂಜಾಡಿ
ಕಾನೂನು ಸಲಹೆಗಾರರು: ಶ್ರೀಮತಿ ಸುಪ್ರೀತಾ ಕೆ. ಶೆಟ್ಟಿ
ಆರೋಗ್ಯ ಮಾಹಿತಿ ವಿಭಾಗ: ಡಾ. ಶಾಲ್ಮಲೀ ಸುರೇಶ್
ಮನೋರಂಜನಾ ವಿಭಾಗ: ಶ್ರೀಮತಿ ರೇವತಿ ಶೆಟ್ಟಿ
ಶೈಕ್ಷಣಿಕ ವಿಭಾಗ: ಶ್ರೀಮತಿ ನಂದಿನಿ ನಾಗರಾಜ್ ಶೆಟ್ಟಿ
ಕ್ರೀಡಾ ವಿಭಾಗ: ಶ್ರೀ ನವೀನ್ ಶೆಟ್ಟಿ

**ಪೋಷಕ ಸದಸ್ಯರು:**
ಶ್ರೀಮತಿ ಮನೋರಮ ಚೌಟ
ಶ್ರೀಮತಿ ವೇದ ಎಸ್. ಶೆಟ್ಟಿ
ಶ್ರೀ ಬಿ. ಕುಸುಮಾಕರ ಶೆಟ್ಟಿ
ಶ್ರೀ ಆರ್.ಎಸ್. ಶೆಟ್ಟಿ
ಶ್ರೀಮತಿ ವಸಂತಿ ಪಿ. ಶೆಟ್ಟಿ
ಶ್ರೀ ಪ್ರಕಾಶ್ ಶೆಟ್ಟಿ
ಶ್ರೀ ಎ. ಜೆ. ಶೆಟ್ಟಿ
ಶ್ರೀಮತಿ ಗೀತ ಭಗವಾನ್‌ದಾಸ್ ರೈ
ಶ್ರೀ ಶ್ರೀನಿವಾಸ ಸೂಡ

**ಪ್ರಕಾಶಕರು:**
ಶ್ರೀ ವಿಜಯ್ ಜೆ. ಶೆಟ್ಟಿ ಹಾಲಾಡಿ

## ಒಳ ಪುಟಗಳಲ್ಲಿ.....

| | ಪುಟ |
|---|---|
| ಸಂಪಾದಕೀಯ | 2 |
| ಅಧ್ಯಕ್ಷರ ಮಾತು | 3 |
| ಗೌರವ ಕಾರ್ಯದರ್ಶಿಯವರ ವರದಿ | 4 |
| " ಬೇಸಿಗೆಯ ಬೇಗೆಗೆ ಬತ್ತುತ್ತಿದೆ ಅಂತರ್ಜಲ....., ನೀರಿನ ಸಂರಕ್ಷಣೆಗೆ ನಮ್ಮ ಪಾಲು ಬಹು ಮುಖ್ಯ.....!" | 5 |
| ಬಂಟರ ಸಂಘ ಬೆಂಗಳೂರು – ಮಹಿಳಾ ವಿಭಾಗ ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆ | 6 |
| ಹೆಬ್ರಿ ಬಂಟರ ಸಂಘ–ಹೆಬ್ಬೇರಿ ಬಂಟ ರತ್ನ ಪ್ರಶಸ್ತಿ | 9 |
| ಬಂಟರ ಸಂಘ ಬೆಂಗಳೂರು–ವೈದ್ಯಕೀಯ ಮತ್ತು ವಿಮಾ ಸಮಿತಿ – 2024–26 | 9 |
| ಬಂಟರ ಸಂಘ ಬೆಂಗಳೂರು – ವಿದ್ಯಾರ್ಥಿ ವೇತನ ಮತ್ತು ಪ್ರಶಸ್ತಿ ಸಮಿತಿ 2024–26 | 11 |
| 'ಸಂಕಲ್ಪ' "ಶಿಕ್ಷಣದಿಂದ ಸಂಪನ್ನತೆ...... ಇದೇ ನಮ್ಮ ಸಂಕಲ್ಪ" | 13 |

### ಮುಖ ಪುಟ

ವಿವಾಹ ವೇದಿಕೆ ಮತ್ತು ಕಾನೂನು ವಿಭಾಗದ ವತಿಯಿಂದ ಜೀವನ ಜೋಕಾಲಿ ವಧು–ವರರ ಸಮಾವೇಶ

ಮಹಿಳಾ ವಿಭಾಗದ ವತಿಯಿಂದ ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆ "ಭವತೀ"

ಹೆಬ್ಬೇರಿ ಬಂಟ ರತ್ನ ಪ್ರಶಸ್ತಿಯನ್ನು ಸ್ವೀಕರಿಸಿದ ನಮ್ಮ ಸಂಘದ ಅಧ್ಯಕ್ಷರಾದ ಸಿಎ. ಅಶೋಕ್ ಶೆಟ್ಟಿ ಎಂ. ರವರು

ಈ ಸಂಚಿಕೆಯಲ್ಲಿ ಪ್ರಕಟವಾದ ಲೇಖನಗಳಲ್ಲಿನ ಅಭಿಪ್ರಾಯಗಳು ಆಯಾ ಲೇಖಕರಿಗೆ ಸೇರಿದ್ದು, ಇದರಲ್ಲಿ ಬಂಟರ ಸಂಘಕ್ಕೆ ಯಾವುದೇ ತೆರನಾದ ಜವಾಬ್ದಾರಿ ಇರುವುದಿಲ್ಲ. – ಸಂಪಾದಕ ಮಂಡಳಿ

# ಸಂಪಾದಕೀಯ



## ಮರಳಿ ಬಂದಿದೆ ಯುಗಾದಿ ಹಬ್ಬ

ಯುಗಾದಿ ಕನ್ನಡಿಗರ ಪಾಲಿನ ವಿಶೇಷ ಆಚರಣೆ. ಚೈತ್ರ ಮಾಸದ ಮೊದಲ ದಿನ. ಹೊಸ ವರ್ಷಕ್ಕೆ ನಾಂದಿ. ಎಲ್ಲೆಲ್ಲೂ ಸಂಭ್ರಮ–ಸಡಗರ. ಹಸಿರು ತೋರಣಗಳ ಅಲಂಕಾರ. ಬೇವು ಬೆಲ್ಲವನ್ನು ಹಂಚಿ ತಿನ್ನುವ, ಆ ಮೂಲಕ ಬದುಕಿಗೆ ಒಂದು ಮಹತ್ವದ ಸಂದೇಶ ರವಾನಿಸುವ ಅನನ್ಯ ಆಚರಣೆ. ಕರ್ನಾಟಕ ಬಯಲು ಸೀಮೆ, ಮೈಸೂರು, ಬೆಂಗಳೂರು, ಆಂಧ್ರ, ಮಹಾರಾಷ್ಟ್ರ ಮೊದಲಾದ ಪ್ರದೇಶಗಳ ಜನರು ಚಾಂದ್ರಮಾನ ಪರಿಪಾಲಕರಾದರೆ, ದಕ್ಷಿಣ ಕರಾವಳಿ, ತಮಿಳುನಾಡು, ಕೇರಳ ಮೊದಲಾದೆಡೆ ಸೌರಮಾನ ಯುಗಾದಿಯನ್ನು ಆಚರಿಸುತ್ತಾರೆ. ಮೇಷ ಮಾಸದ ಪ್ರಾರಂಭದ ದಿನವೇ ಸೌರಮಾನ ಯುಗಾದಿ.

ಯುಗಾದಿ ಹೆಸರೇ ಸೂಚಿಸುವಂತೆ ಯುಗದ ಆದಿ. ಯುಗಾದಿ ಅಥವಾ ಉಗಾದಿ ಎಂದರೆ ಸೃಷ್ಟಿಯ ಆರಂಭ ಅಥವಾ ಹೊಸ ಸಂವತ್ಸರ ಎಂಬುದು ಜನಜನಿತ ಮಾತು. ಗುಜರಾತ್ – ರಾಜಸ್ಥಾನದ ಕೆಲವು ಭಾಗಗಳನ್ನು ಹೊರತುಪಡಿಸಿ ಬಹುತೇಕ ರಾಜ್ಯಗಳಲ್ಲಿ ಚೈತ್ರಮಾಸದಿಂದ ಹಿಂದೂ ಸಂವತ್ಸರದ ಹೊಸವರ್ಷಾಚರಣೆ ನಡೆದು ಬಂದಿದೆ. ಚಾಂದ್ರಮಾನ ಯುಗಾದಿಯನ್ನು ಚಂದ್ರಾಚಾರದಿಂದಲೂ, ಸೌರಮಾನ ಯುಗಾದಿಯನ್ನು ಸೂರ್ಯನು ಮೇಷ ರಾಶಿಯನ್ನು ಪ್ರವೇಶಿಸುವ ದಿನದಿಂದ ಆಚರಿಸುತ್ತಾರೆ. ಹಿಂದೂಗಳು ಯುಗಾದಿಯ ದಿನದಂದು ಎಣ್ಣೆ (ತೈಲ) ಹಚ್ಚಿಕೊಂಡು ಸ್ನಾನ ಮತ್ತು ದೇವರ ಪೂಜೆ ಮಾಡುವ ಪರಿಪಾಠವನ್ನು ಹೊಂದಿದ್ದಾರೆ. ಹೊಸ ಬಟ್ಟೆ ತೊಟ್ಟು ದೇವಾಲಯಗಳಿಗೆ ಹೋಗಿ ಬರುತ್ತಾರೆ. ಬಹುವಾಗಿ ಎಲ್ಲರ ಮನೆಯಲ್ಲಿ ತಾವೂ ಬೇವು–ಬೆಲ್ಲ ತಿಂದು ಇತರರಿಗೂ ನೀಡುತ್ತಾರೆ. ಸೂರ್ಯನ ತಾಪ ಹೆಚ್ಚಿರುವ ಈ ಕಾಲದಲ್ಲಿ ಬೇವು ಬೆಲ್ಲ ತಿನ್ನುವುದರಿಂದ ಶರೀರ ವಜ್ರಕಾಯವಾಗುತ್ತದೆ ಎಂಬುದು ನಂಬಿಕೆ. ಉತ್ತರ ಕರ್ನಾಟಕದ ಬಹುತೇಕ ಜಿಲ್ಲೆಗಳಲ್ಲಿ ಮಧ್ಯಾಹ್ನ ಒಬ್ಬಟ್ಟು, ಮಾವಿನ ಕಾಯಿ ಚಿತ್ರಾನ್ನ ಮಾಡಿ ಮನೆ ಮಂದಿಯೆಲ್ಲಾ ಒಟ್ಟಿಗೆ ಕುಳಿತು ಊಟ ಮಾಡುತ್ತಾರೆ. ಸಂತಸ ಹಂಚಿಕೊಳ್ಳುತ್ತಾರೆ.

ಕುಂದಾಪುರದ ಕನ್ನಡ ಭಾಷಿಕ ಪರಿಸರದಲ್ಲಿ ಆರುಡ್ ಹಬ್ಬ ಎಂಬುದಾಗಿ ಆಚರಿಸುತ್ತಾರೆ. "ಆರು" ಎಂಬ ಪದಕ್ಕೆ ಬೇಸಾಯ ಎಂಬ ಅರ್ಥವಿದೆ. ಉಳುಮೆ, ನೆಲಸುಡುವುದು ಹಾಗೂ ನೆಲದ ಫಲವಂತಿಕೆಗಾಗಿ ಕೊಟ್ಟು, ಗೊಬ್ಬರವನ್ನು ಸೇರಿಸಿ ಮಣ್ಣನ್ನು ಫಲವತ್ತಾಗಿಸುವ ಸಾಂಕೇತಿಕ ಆಚರಣೆ ಇದಾಗಿದೆ. ಸೌರಮಾನ ಯುಗಾದಿಯ ದಿನದಂದು ಈ ಆಚರಣೆ ನಡೆಯುತ್ತದೆ. ಅಂದರೆ ವರ್ಷದ ತಿಂಗಳುಗಳ ಪೈಕಿ ಮೊದಲ ತಿಂಗಳೆನಿಸಿದ ಹಗ್ಗಿನ ತಿಂಗಳಲ್ಲಿ, ತುಳುವಿನಲ್ಲಿ "ಪಗ್ಗು" ಎಂದೂ ಗುರುತಿಸಲಾಗುವ, ಹಗ್ಗಿನ ತಿಂಗಳಿನ ಮೊದಲ ದಿನದಂದು ಈ ಆಚರಣೆ ನಡೆಯುತ್ತದೆ. ಅಂದು ಸೂರ್ಯ ಮೂಡುವ ಮುನ್ನ ಮುಂಜಾವಿನಲ್ಲಿಯೇ ಯಾವುದಾದರೊಂದು ಗದ್ದೆಯನ್ನು ಆಯ್ದುಕೊಂಡು ಎತ್ತು ಇಲ್ಲವೇ ಕೋಣವನ್ನು ಹೂಡುಕಟ್ಟಿ ಎರಡೆರಡು ಸೊನ್ನೆಗಳು ಒಳಗೊಳಗೇ ಸಂಧಿಸಿದಂತೆ ಕಾಣುವ ಎರಡು ಭೂಪ್ರದೇಶಗಳನ್ನು ಸಾಂಕೇತಿಕವಾಗಿ ಉತ್ತು ಬಿಡುತ್ತಾರೆ. ಉಳುಮೆ ಮಾಡಿದ ಮೇಲೆ ಆರು ಕಡೆ ಹುಲ್ಲು, ಹೊಟ್ಟು ಸೇರಿಸಿ ಬೆಂಕಿ ಹಾಕುವುದಲ್ಲದೆ ಅವುಗಳ ಪಕ್ಕದಲ್ಲಿಯೇ ಗೊಬ್ಬರವಿಕ್ಕುವ ಮೂಲಕ ನೆಲಕ್ಕೆ ನಲುವು (ಕಸುವು, ಗೊಬ್ಬರ) ಸೇರಿಸುವ ಪ್ರಕ್ರಿಯೆಯೂ ನಡೆಯುತ್ತದೆ. ಅನಂತರ ಇನ್ನುಳಿದ ಗದ್ದೆಗಳ ಯಾವುದಾದರೂ ಒಂದು ಮೂಲೆಯಲ್ಲಿ ಒಂದೊಂದು ಹುಲ್ಲಿನ ಪಿಂಡಿ (ಉಂಡೆ)ಯನ್ನುರಿಸಿ, ಹೊಟ್ಟು ಹಾಕಿ ಇದೇ ರೀತಿಯಲ್ಲಿ ಬೆಂಕಿ ಹಚ್ಚಿ ಗೊಬ್ಬರ ಹಾಕಲಾಗುತ್ತದೆ.

ಮುಖ್ಯವಾಗಿ ಕಾತಿ ಬೇಸಾಯದ ಆರಂಭದ ಕಾಯಕವಿದು. ಇಲ್ಲಿ ಬರುವ ಉಳುಮೆ, ಬೆಂಕಿ ಹಾಕುವುದು, ಗೊಬ್ಬರ ಸೇರಿಸುವುದು ಇತ್ಯಾದಿ ವಿಧಿ ಕ್ರಿಯೆಗಳು ಕೃಷಿ ಚಟುವಟಿಕೆಗೆ ನಾಂದಿ ಹೇಳುವ ಸಂಕೇತಗಳಾಗಿವೆ. ಕಾಯಕ ಆರಂಭಕ್ಕೆ ಮುನ್ನ ಭೂಮಿಗೆ ವಂದನೆ ಸಲ್ಲಿಸುವ ಆರಾಧನಾ ಮನಸ್ಸಿನ ಫಲವೂ ಹೌದು. ಒಟ್ಟಿನಲ್ಲಿ ಇದು ಆರಂಭದ ನೆಲ ಪೂಜೆ. ಹಾಗೆಯೇ, ಇದು ಸೂರ್ಯನ ಬೆಳಕು ಕಾಣುವ ಮುಂಚೆಯೇ ನಡೆಸುವ ಭೂಮಿ ಪೂಜೆಯಾಗಿದೆ. ಹೀಗೆ ಕುಂದಾಪುರದ ಕೃಷಿ ಪರಂಪರೆಯಲ್ಲಿ ಆರ್ನೋಡು ಹಬ್ಬಕ್ಕೆ ತನ್ನದೇ ಆದ ವಿಶಿಷ್ಠ ಸಾಂಸ್ಕೃತಿಕ ಮಹತ್ವವಿದೆ.

ಕೂಡಿ ಬಾಳಿದರೆ ಸ್ವರ್ಗ ಸುಖ ಎಂಬುದು ಯುಗಾದಿ ಹಬ್ಬದ ಸಂದೇಶ. ಜೀವನದಲ್ಲಿ ಏನೇ ಏರುಪೇರಾದರೂ ಎಲ್ಲರೂ ಸಮನ್ವಯದೊಂದಿಗೆ ಒಟ್ಟಾಗಿ ಬಾಳಬೇಕೆನ್ನುವ ಆಶಯ ಇಲ್ಲಿನದು. ಸ್ನೇಹ ಚಿಂತನೆ ಸಂಚಿಕೆಯ ಎಲ್ಲಾ ಓದುಗರಿಗೂ ಯುಗಾದಿ ಹಬ್ಬದ ಹಾರ್ದಿಕ ಶುಭಾಶಯಗಳು.

**ರವೀಂದ್ರ ಶೆಟ್ಟಿ ಹಟ್ಟಿಯಂಗಡಿ**
**ಸಂಪಾದಕರು**

# ಅಧ್ಯಕ್ಷರ ಮಾತು



**ಎಲ್ಲರಿಗೂ ಹರ್ಷಭರಿತ ಯುಗಾದಿ (ಬಿಸು) ಹಬ್ಬದ ಶುಭಾಷಯಗಳು!**
**ಪ್ರೀತಿಯ ಬಂಟರ ಸಂಘದ ಸದಸ್ಯರೇ,**

ನಮ್ಮ ಕರಾವಳಿ ಕರ್ನಾಟಕದ ವೈಭೋಗದ ಹಬ್ಬ ಬಿಸು. ಹಿಂದೂಗಳ ಹೊಸ ವರ್ಷದ ಈ ಶುಭ ಸಂದರ್ಭದಲ್ಲಿ ನಿಮಗೆ ಮತ್ತು ನಿಮ್ಮ ಕುಟುಂಬಕ್ಕೆ ಭಗವಂತನು ಆಯುರಾರೋಗ್ಯ, ಸಕಲ ಶಕ್ತಿ, ಸಂತೋಷ, ಐಶ್ವರ್ಯ, ಸಂಪತ್ತು, ಸಮೃದ್ಧಿ, ವಿದ್ಯೆ-ಬುದ್ಧಿಯನ್ನು ನೀಡಿ ಆಶೀರ್ವದಿಸಲಿ ಎಂದು ಹಾರೈಸುತ್ತೇನೆ.

ಈ ಬಿಸು ಹಬ್ಬವನ್ನು ನಿಮ್ಮೊಂದಿಗೆ ಆಚರಿಸಲು, ದಿನಾಂಕ 14.04.2025 ಸೋಮವಾರದಂದು ನಮ್ಮ ಸಂಘದಲ್ಲಿ ನಡೆಯುವ ಬಿಸು ಸಮಾರಂಭಕ್ಕೆ ಆತ್ಮೀಯವಾಗಿ ಸ್ವಾಗತಿಸುತ್ತೇವೆ. ಬನ್ನಿ, ನಮ್ಮ ಸಂಸ್ಕೃತಿ, ಪರಂಪರೆ ಮತ್ತು ಬಂಧುತ್ವವನ್ನು ಒಂದಾಗಿ ಆಚರಿಸೋಣ.

ಬಂಟ ಸಮುದಾಯವು ಶೈಕ್ಷಣಿಕ ಮಹತ್ವಕ್ಕೆ ಸದಾ ಮೊದಲ ಸ್ಥಾನ ನೀಡುತ್ತಾ ಬಂದಿದೆ. ಪೋಷಕರು ಬದುಕಿನಲ್ಲಿ ಬೇರೆ ಬೇರೆ ವಿಷಯಗಳಲ್ಲಿ ತ್ಯಾಗ ಮಾಡಿದರೂ, ಮಕ್ಕಳ ಶಿಕ್ಷಣದ ವಿಷಯದಲ್ಲಿ ಎಂದೂ ಹಿಂದೆ ಬಿದ್ದಿಲ್ಲ. ಇದೇ ಕಾರಣದಿಂದ ನಮ್ಮ ಸಮುದಾಯ ಇಂದು ಇಷ್ಟು ಎತ್ತರಕ್ಕೇರಿದೆ.

ನಮ್ಮ ಆರ್. ಎನ್. ಎಸ್. ವಿದ್ಯಾನಿಕೇತನ ಶಾಲೆಯು ಶ್ರೇಷ್ಠ ಪರಂಪರೆಗೆ ಸಾಕ್ಷಿಯಾಗಿದೆ. ಸುಮಾರು 50 ವರ್ಷಗಳ ಹಿಂದೆ, ಶ್ರೀಮತಿ ರಾಧಾಬಾಯಿ ತಿಮ್ಮಪ್ಪ ಭಂಡಾರಿಯವರಿಂದ ದೇಣಿಗೆಯಾಗಿ ನೀಡಲಾದ ಭೂಮಿಯಲ್ಲಿ ನಿರ್ಮಿಸಲಾದ ಈ ಶಾಲೆ, ನಮ್ಮ ದಾನಿಗಳ ಉದಾರತೆ, ಕಾರ್ಯಕಾರಿ ಸಮಿತಿಯ ಶ್ರಮ ಹಾಗೂ ದೂರದೃಷ್ಟಿಯಿಂದ ಇಂದು ಸಾವಿರಾರು ಮಕ್ಕಳ ಭವಿಷ್ಯ ಕಟ್ಟಿದೆ. ಅವರ ಧನಾತ್ಮಕ ಸಹೃದಯಿ ಮನಸ್ಸಿಗೆ ಸಂಘವು ಸದಾ ಋಣಿ ಆಗಿರುತ್ತದೆ.

ಇಂದು ಆರ್. ಎನ್. ಎಸ್. ವಿದ್ಯಾನಿಕೇತನ ಶಾಲೆಯು ಜಾಗದ ಅಭಾವವನ್ನು ಎದುರಿಸುತ್ತಿದ್ದು, ಹೊಸ ಮೂಲ ಸೌಕರ್ಯದ ಅಗತ್ಯತೆ ಇದೆ. ಇದನ್ನು ಗಮನದಲ್ಲಿಟ್ಟುಕೊಂಡು, ಪ್ರಸ್ತುತ ಕಾರ್ಯಕಾರಿ ಸಮಿತಿಯು ಹೊಸ ಶಾಲೆ ಮತ್ತು ರಾಧಾಬಾಯಿ ತಿಮ್ಮಪ್ಪ ಭಂಡಾರಿ ಆಡಿಟೋರಿಯಂನ ಪುನರ್‌ನಿರ್ಮಾಣದ ಯೋಜನೆ ರೂಪಿಸುತ್ತಿದೆ. ಈ ಪ್ರಸ್ತಾವನೆಯನ್ನು ಮಹಾಸಭೆ / ವಿಶೇಷ ಮಹಾಸಭೆಯಲ್ಲಿ ನಿಮ್ಮ ಮುಂದೆ ಇಡಲಾಗುವುದು.

ಇದೇ ಸಂದರ್ಭದಲ್ಲಿ, ಕೆಲವು ವಿದ್ಯಾರ್ಥಿಗಳಿಗೆ ಆರ್ಥಿಕ ಸಮಸ್ಯೆಯ ಕಾರಣದಿಂದ ಉತ್ತಮ ಶಿಕ್ಷಣದ ಅವಕಾಶದ ಕೊರತೆ ಇದೆ ಎಂಬ ಸತ್ಯವನ್ನು ಮರೆತಿಲ್ಲ. ಅದಕ್ಕಾಗಿ ಸಂಘವು ಆರಂಭಿಸಿದ 'ಸಂಕಲ್ಪ' ಯೋಜನೆಯಡಿಯಲ್ಲಿ ಅರ್ಹ ವಿದ್ಯಾರ್ಥಿಗಳಿಗೆ ಉಚಿತ ಶಿಕ್ಷಣವನ್ನು ನೀಡುತ್ತಿದ್ದೇವೆ. ಪ್ರತೀ ವಿದ್ಯಾರ್ಥಿಗೆ ವರ್ಷಕ್ಕೆ ರೂ. 1,50,000/- ರಂತೆ 2 ವರ್ಷದ ಪಿಯುಸಿ ವಿದ್ಯಾಭ್ಯಾಸಕ್ಕೆ 60 ವಿದ್ಯಾರ್ಥಿಗಳಿಗೆ ಸಂಘವು ವರ್ಷಂಪ್ರತಿ ಸುಮಾರು 1.8 ಕೋಟಿ ರೂಪಾಯಿಗಳನ್ನು ಭರಿಸುತ್ತಿದೆ. ಇದರ ಅಂಗವಾಗಿ ಮುಂದಿನ ವರ್ಷಗಳಲ್ಲಿ ಈ ಯೋಜನೆಯು ಶಾಶ್ವತವಾಗಿ ಉಳಿಯಲಿ ಎನ್ನುವ ಸದುದ್ದೇಶದಿಂದ ದಾನಿಗಳಾದ ತಾವು ಪ್ರತೀ ವಿದ್ಯಾರ್ಥಿಗೆ ಒಂದು ವರ್ಷಕ್ಕೆ ಕನಿಷ್ಠ ರೂ. 40,000/- ದಂತೆ ಕೊಡುಗೆ ನೀಡುವಂತೆ ಮನವಿ ಮಾಡುತ್ತೇವೆ.

ದಿನಾಂಕ 22.02.2025 ರಂದು ವಿವಾಹ ವೇದಿಕೆ ಸಮಿತಿ ಮತ್ತು ಕಾನೂನು ವಿಭಾಗ ಸಮಿತಿಯವರು ಆಯೋಜಿಸಿದ 'ಜೀವನ ಜೋಕಾಲಿ' ಎಂಬ ಶೀರ್ಷಿಕೆಯಡಿಯಲ್ಲಿ ನಡೆದ ವಧು-ವರರ ಸಮಾವೇಶ ಮತ್ತು ಹಲವು ವೈವಿಧ್ಯಮಯ ಕಾರ್ಯಕ್ರಮಗಳು ಹಾಗೂ ಕಾನೂನು ಮಾಹಿತಿ, ಕಾನೂನಿನ ಮಹತ್ವ ಮತ್ತು ಸಲಹೆ ಕಾರ್ಯಾಗಾರವು ಬಹಳ ಸೊಗಸಾಗಿ ಮೂಡಿಬಂದಿತು.

ನಮ್ಮ ಸಂಘದ ಪ್ರತಿಯೊಂದು ಕಾರ್ಯಕ್ರಮಕ್ಕೆ ಸದಸ್ಯ ಬಾಂಧವರೆಲ್ಲರೂ ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ಸಂಘದ ಕಾರ್ಯಕ್ರಮಗಳನ್ನು ಚಂದಗಾಣಿಸಬೇಕಾಗಿ ಸದಸ್ಯ ಬಾಂಧವರಲ್ಲಿ ವಿನಂತಿ.

**ಇಂತಿ ತಮ್ಮ ಪ್ರೀತಿಯ**
**ಸಿ.ಎ. ಅಶೋಕ್ ಶೆಟ್ಟಿ ಎಂ**
**ಅಧ್ಯಕ್ಷರು**

# ಗೌರವ ಕಾರ್ಯದರ್ಶಿಯವರ ವರದಿ



"ಈ ವರ್ಷದ ಯುಗಾದಿಯು ಹೊಸ ಭರವಸೆ ಮತ್ತು ಹೊಸ ಆರಂಭಗಳನ್ನು ತರಲಿ".
ಸದಸ್ಯರೆಲ್ಲರಿಗೂ ಬಿಸು (ಯುಗಾದಿ) ಹಬ್ಬದ ಹಾರ್ದಿಕ ಶುಭಾಶಯಗಳು.

**ಮಾನ್ಯ ಸದಸ್ಯರೇ,**

ಸಾಂಪ್ರದಾಯದಂತೆ ನಮ್ಮ ಸಂಘದಲ್ಲೂ ವರ್ಷಂಪ್ರತಿಯಂತೆ ಈ ವರ್ಷವೂ ದಿನಾಂಕ 14.04.2025ರಂದು ಬಿಸು (ಯುಗಾದಿ) ಹಬ್ಬವನ್ನು ವಿವಿಧ ಕಾರ್ಯಕ್ರಮಗಳೊಂದಿಗೆ ಆಚರಿಸಲಾಗುವುದು. ಸದಸ್ಯರೆಲ್ಲರೂ ಹೆಚ್ಚಿನ ಸಂಖ್ಯೆಯಲ್ಲಿ ಈ ಕಾರ್ಯಕ್ರಮದಲ್ಲಿ ಭಾಗವಹಿಸಬೇಕಾಗಿ ವಿನಂತಿ.

ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆಯ ಅಂಗವಾಗಿ ದಿನಾಂಕ 08.03.2025ರಂದು ಮಹಿಳಾ ವಿಭಾಗದ ವತಿಯಿಂದ ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆ "ಭವತೀ" ವಿವಿಧ ಸಾಂಸ್ಕೃತಿಕ ಕಾರ್ಯಕ್ರಮಗಳೊಂದಿಗೆ ಕಾರ್ಯಕ್ರಮವನ್ನು ಸಂಘದ ಆವರಣದಲ್ಲಿ ಆಚರಿಸಲಾಯಿತು. ಕಾರ್ಯಕ್ರಮದ ಮುಖ್ಯ ಅತಿಥಿಗಳಾಗಿ ವಿಭು ಅಕಾಡೆಮಿಯ ಚೇರ್‌ಪರ್ಸನ್ ಡಾ. ಆರತಿ ವಿ.ಬಿ., ಎಫ್.ಕೆ.ಸಿ.ಸಿ.ಐನ ವೈಸ್ ಪ್ರೆಸಿಡೆಂಟ್ ಶ್ರೀಮತಿ ಉಮಾ ರೆಡ್ಡಿಯವರು ಭಾಗವಹಿಸಿದ್ದರು. ಕಾರ್ಯಕ್ರಮದಲ್ಲಿ ಕ್ರೀಡಾ ಕ್ಷೇತ್ರದ ಸಾಧಕಿ ಶ್ರೀಮತಿ ಶ್ಯಾಮಲ ಶೆಟ್ಟಿ, ಶಿಕ್ಷಣ ಕ್ಷೇತ್ರದ ಸಾಧಕಿ ಶ್ರೀಮತಿ ಸುರೇಖಾ ಶೆಟ್ಟಿ ಮತ್ತು ಕೃಷಿ ಕ್ಷೇತ್ರದ ಸಾಧಕಿ ಶ್ರೀಮತಿ ಅನುರಾಧ ಶೆಟ್ಟಿಯವರನ್ನು ಸನ್ಮಾನಿಸಲಾಯಿತು.

ಬೆಂಗಳೂರು ಹಾಗೂ ರಾಜ್ಯದ ವಿವಿಧ ಭಾಗಗಳ ಗ್ರಾಮೀಣ ಹಾಗೂ ಆರ್ಥಿಕವಾಗಿ ಸಂಕಷ್ಟದಲ್ಲಿರುವ ಬಂಟ ಸಮುದಾಯದ ಪ್ರತಿಭಾನ್ವಿತ ವಿದ್ಯಾರ್ಥಿಗಳಿಗೆ ಬಂಟರ ಸಂಘ ಆರ್.ಎನ್.ಎಸ್. – 2 ಸಂಸ್ಥೆಯಲ್ಲಿ ಉಚಿತ ಪಿಯುಸಿ ಶಿಕ್ಷಣ ಹಾಗೂ ವಸತಿ ಕಲ್ಪಿಸುವ ಸಂಕಲ್ಪ ಯೋಜನೆಯ ಸಂಪೂರ್ಣ ವಿವರ ಮತ್ತು ಅರ್ಜಿ ನಮೂನೆಗಳನ್ನು ಈ ಸಂಚಿಕೆಯಲ್ಲಿ ಹಾಗೂ ಸಂಘದ ವೆಬ್‌ಸೈಟ್‌ನಲ್ಲಿ (www.buntsanghablr.com) ಪ್ರಕಟಿಸಲಾಗಿದೆ. ಅತ್ಯಂತ ಅರ್ಹರಿಗೆ ಈ ಯೋಜನೆಯ ಫಲ ಸಿಗುವಂತಾಗಲು ತಮ್ಮೆಲ್ಲರ ಸಹಕಾರವನ್ನು ಕೋರುತ್ತಿದ್ದೇನೆ.

ಬಂಟರ ಸಂಘ ಆರ್.ಎನ್.ಎಸ್ ವಿದ್ಯಾನಿಕೇತನವು ಕೇಂಬ್ರಿಡ್ಜ್ ವಿಶ್ವವಿದ್ಯಾಲಯ ಮುದ್ರಣಾಲಯದ ಜೊತೆ "Knowledge Partner" ಆಗಿ ಕಾರ್ಯನಿರ್ವಹಿಸಲಿದೆ. ಮಕ್ಕಳ ಸಂವಹನ ಕೌಶಲ್ಯವನ್ನು ಉತ್ತಮಗೊಳಿಸುವುದು ಇದರ ಉದ್ದೇಶವಾಗಿದೆ.

ದಿನಾಂಕ 03.04.2025ರಂದು ಸಂಘದ ರಾಧಾಬಾಯಿ ತಿಮ್ಮಪ್ಪ ಭಂಡಾರಿ ಸಭಾಭವನದಲ್ಲಿ ಶಾಲಾ ಪೋಷಕರಿಗೆ Orientation ಕಾರ್ಯಕ್ರಮವನ್ನು ಆಯೋಜಿಸಲಾಗಿತ್ತು. ಈ ಕಾರ್ಯಕ್ರಮದಲ್ಲಿ ಸುಮಾರು 250ಕ್ಕೂ ಅಧಿಕ ಪೋಷಕರು ಭಾಗವಹಿಸಿದ್ದರು.

ಇಂತಿ ತಮ್ಮ ಪ್ರೀತಿಯ
**ವಿಜಯ್ ಜೆ. ಶೆಟ್ಟಿ ಹಾಲಾಡಿ**
ಗೌರವ ಕಾರ್ಯದರ್ಶಿ

# " ಬೇಸಿಗೆಯ ಬೇಗೆಗೆ ಬತ್ತುತ್ತಿದೆ ಅಂತರ್ಜಲ...., ನೀರಿನ ಸಂರಕ್ಷಣೆಗೆ ನಮ್ಮ ಪಾಲು ಬಹು ಮುಖ್ಯ....!"

**– ಕೆ. ಸಂತೋಷ್ ಶೆಟ್ಟಿ ಮೊಳಹಳ್ಳಿ ಕುಂದಾಪುರ.**



ನಾಲ್ಕು ಋತುಗಳಲ್ಲಿ ವಸಂತ ಹಾಗೂ ಶರತ್ಕಾಲದ ನಡುವೆ ಬೇಸಿಗೆ ಯೆಂಬುದು ದಗೆಯ ಕಾಲವಾಗಿದೆ. ದೀರ್ಘಾವಧಿಯ ಹಗಲು ಹಾಗೂ ಅಲ್ಪಾವಧಿಯ ಇರುಳು ಬೇಸಿಗೆ ಕಾಲದ ವೈಶಿಷ್ಟವಾಗಿದೆ. ಖಗೋಳ ವಿಜ್ಞಾನ ಮತ್ತು ವಲಯವಾರು ಹವಾಮಾನ ವಿಜ್ಞಾನಗಳನ್ನು ಆಧರಿಸಿ, ಋತುಗಳು ವಿವಿಧ ವಲಯಗಳಲ್ಲಿ ವಿವಿಧ ದಿನಾಂಕಗಳಂದು ಆರಂಭವಾಗುತ್ತವೆ. ಆದರೂ, ದಕ್ಷಿಣ ಗೋಲಾರ್ಧದಲ್ಲಿ ಬೇಸಿಗೆಯಾಗಿದ್ದರೆ ಉತ್ತರ ಗೋಲಾರ್ಧದಲ್ಲಿ ಚಳಿಗಾಲವಿರುತ್ತದೆ. ದಕ್ಷಿಣ ಗೋಲಾರ್ಧದಲ್ಲಿ ಚಳಿಗಾಲವಿದ್ದರೆ ಉತ್ತರ ಗೋಲಾರ್ಧದಲ್ಲಿ ಬೇಸಿಗೆ ಕಾಲವಿರುತ್ತದೆ.

ಬೇಸಿಗೆಯಲ್ಲಿ ನಾವು ಅನುಸರಿಸಬೇಕಾದಂತ ಕ್ರಮಗಳು ಮತ್ತು ನಮ್ಮ ಜೀವನ ಮಟ್ಟದ ಮೇಲೆ ವಿಪರೀತವಾದ ಅಂತಹ ಪ್ರತಿಕೂಲ ಪರಿಸ್ಥಿತಿ ನಿರ್ಮಾಣವಾಗುತ್ತದೆ. ಬೇಸಿಗೆಯಲ್ಲಿ ಮಾನವನ ದೇಹದ ಮೇಲೆ ನೀರಿನ ಪ್ರಮಾಣ ಮತ್ತು ನೀರಿನ ಅಂಶವು ವಿಪರೀತವಾಗಿ ಬೇಕಾಗುತ್ತದೆ.

**ಬೇಸಿಗೆಯಲ್ಲಿ ನೀರಿನ ಅಭಾವ :**

ಮಾರ್ಚ್ ಮತ್ತು ಏಪ್ರಿಲ್, ಮೇ ಸಂದರ್ಭದಲ್ಲಿ ಪ್ರತಿ ಜಿಲ್ಲೆಯಲ್ಲಿಯೂ ನೀರಿನ ಅಭಾವ ಹೆಚ್ಚಾಗುತ್ತದೆ. ಅಂತರ್ಜಲದ ಕೊರತೆ, ಇಂಗು ಗುಂಡಿಯ ಅಭಾವ, ಬೋರ್ವೆಲ್ ಗಳ ಅತಿಕ್ರಮಣ ಹೀಗೆ ಹತ್ತಾರು ಸಮಸ್ಯೆಗಳಿಂದ ನೀರಿನ ಮೂಲ ಜಲ ಬತ್ತಿ ಹೋಗುತ್ತಿದೆ. ಇದರಿಂದ ಪ್ರಾಣಿ ಪಕ್ಷಿ ಮಾನವನ ದೇಹದ ಮೇಲೆ ವಿಪರೀತ ಪರಿಣಾಮ ಬೀರುತ್ತದೆ. ಬೇಸಿಗೆಯಲ್ಲಿ ನಾವು ಹೆಚ್ಚಾಗಿ ವ್ಯರ್ಥ ಮಾಡುವಂತಹ ನೀರು ನಮ್ಮ ಜೀವನದ ಮೇಲೆ ವಿಪರೀತ ಪರಿಣಾಮ ಬೀರುತ್ತದೆ. ಬೇಸಿಗೆಯಲ್ಲಿ ಕಾಡು ಪ್ರದೇಶದಲ್ಲಿ ಕಾಡಿನ ಪ್ರಾಣಿಗಳಿಗೆ ನೀರಿನ ಅಭಾವವಾದರೆ, ನಾಡಿನಲ್ಲಿ ಬದುಕುವಂತಹ ಮಾನವನಿಗೆ ಇನ್ನಷ್ಟು ನೀರಿನ ಅಭಾವ ಉಂಟಾಗುತ್ತದೆ. ಮಳೆಗಾಲದಲ್ಲಿ ಮಳೆ ನೀರು ಕೊಯ್ಲು ಅಂತರ್ಜಲಗಳ ವೃದ್ಧಿಯನ್ನು ಅಭಿವೃದ್ಧಿಪಡಿಸಿದರೆ, ಬೇಸಿಗೆಯಲ್ಲಿ ಬೋರ್ವೆಲ್‌ಗಳಲ್ಲಿ ಹೆಚ್ಚಾಗಿ ನೀರು ಬರುವುದು ಅದಲ್ಲದೆ, ಬಾವಿಮಟ್ಟದಲ್ಲಿ ನೀರುಗಳು ಮೇಲ್ಭಾಗದಲ್ಲಿ ಸದಾ ಇರುವಂತೆ ನೋಡಿಕೊಳ್ಳಬಹುದು. ಹಾಗಾದರೆ ಮಾನವ ನಿರ್ಮಿತ ಕೆಲವು ಅಡೆತಡೆಗಳಿಂದ ಅಂತರ್ಜಲ ವೃದ್ಧಿಯಲ್ಲಿ ರೀತವಾಗಿ ಹೊಡೆತ ಬಿದ್ದಿದೆ.

**ನಾವು ವ್ಯರ್ಥ ಮಾಡುವ ನೀರು ನಮಗೆ ಕಂಟಕ :–**

ನಾವು ಹೆಚ್ಚಾಗಿ ವ್ಯರ್ಥ ಮಾಡುವಂತಹ ನೀರು ಮುಂದಿನ ಜನಾಂಗಕ್ಕೆ ಕಷ್ಟ ಸಾಧ್ಯವಾಗುತ್ತದೆ. ಬೇಸಿಗೆಯಲ್ಲಿ ನೀರಿನ ಹಹಾಕಾರದಿಂದಾಗಿ ಅದೆಷ್ಟೋ ಪ್ರದೇಶಗಳು ಅಭಿವೃದ್ಧಿ ಕಾಣದೆ ನೆನೆಗುದಿಗೆ ಬಿದ್ದಿದೆ. ಸಮರ್ಪಕವಾದ ಬೋರ್ವೆಲ್‌ನಲ್ಲಿ ನೀರುಗಳು ಕಾಣಿಸದೆ ಮೂಲ ಜಲ ವೃದ್ಧಿಗಳು ಇಂಗಿ ಹೋಗುತ್ತಿವೆ. ಜನಸಾಮಾನ್ಯರು ನೀರಿನ ಕೊರತೆಯನ್ನು ಮನಗೊಂಡು ಸೂಕ್ತವಾದ ಅಂತಹ ವ್ಯವಸ್ಥೆಯನ್ನು ಮಾಡಿಕೊಳ್ಳುವುದಲ್ಲದೆ, ನೀರಿನ ಸಮರ್ಪಕ ನಿರ್ವಹಣೆಯನ್ನು ಮಾಡಿದರೆ ಬೇಸಿಗೆಯ ನೀರಿನ ಬವಣೆ ತಪ್ಪಿಸಬಹುದು.

**ಅಂತರ್ಜಲದ ಕೊರತೆ :–**

ಬಹುಮಹಡಿಯ ಕಟ್ಟಡಗಳ ನಿರ್ಮಾಣದಿಂದ, ದೊಡ್ಡ ದೊಡ್ಡ ಜಮೀನಿನಲ್ಲಿ ಕಾಂಕ್ರಿಟೀಕರಣವನ್ನು ಹೆಚ್ಚಾಗಿ ಮಾಡುವುದರಿಂದ, ಮರ ಗಿಡಗಳನ್ನು ನಾಶ ಮಾಡುವುದರಿಂದ, ಅಂತರ್ಜಲದ ಮೂಲ ಕಗ್ಗೊಲೆಯಾಗುತ್ತಿರುವುದು ಇಂದಿನ ಸಮಾಜಕ್ಕೆ ದುಸ್ತರವಾಗಿ ಪರಿಣಮಿಸಿದೆ. ನೀರು ಸದ್ಬಳಕೆ ಮತ್ತು ನೀರಿನ ಉಪಯೋಗವನ್ನು ಬೇಸಿಗೆಯಲ್ಲಿ ನಾವು ಅದರ ಕಷ್ಟವನ್ನು ನೋಡಿರುತ್ತೇವೆ. ನೀರಿನ ಅಂತರ್ಜಲದ ಹಾಗೂ ಓಜೋನ್ ಪದರದ ಆನೆ ದುಪ್ಪಟ್ಟಾಗುವ ಸಾಧ್ಯತೆ ಹೆಚ್ಚಿರುತ್ತದೆ. ಬೋರ್ವೆಲ್ ಗಳಲ್ಲಿ ಮತ್ತು ಬಾವಿಗಳಲ್ಲಿ ಸಣ್ಣ ಪ್ರಮಾಣದಲ್ಲಿ ನೀರು ಕಾಣಿಸಿಕೊಂಡರೆ ಸಂಭ್ರಮ ಪಡುತ್ತೇವೆ ಆದರೆ ಮಾನವನ ಜೀವಿತ ಅವಧಿಯಲ್ಲಿ ಮತ್ತು ಮಾನವನಿಗೆ ಸಿಗಬೇಕಾದಂತಹ ಅಂತರ್ಜಲದ ಮೂಲ ಇಂದಿನ ದಿನ ಮಾನಸದಲ್ಲಿ ಮರೀಚಿಕೆಯಾಗುತ್ತಿದೆ. ಹಾಗಾದರೆ ಮಾನವ ಮಾಡಿರುವಂತಹ ತಪ್ಪಿಗೆ ಇಂದು ನೀರನ್ನ ಬಳಸಿದಂತಹ ಪರಿಸ್ಥಿತಿಗೆ ನಿರ್ಮಾಣವಾಗುತ್ತಿದೆ. ಹಾಗಾದರೆ ನೀರಿನ ಅಂತರ್ಜಲದ ಕಗ್ಗೊಲೆ ಮಾಡುತ್ತಿರುವುದು ಯಾರು ಎಂದು ನಮ್ಮೊಳಗೆ ಪ್ರಶ್ನೆ ಹಾಕಿಕೊಳ್ಳಬೇಕಿದೆ.

# ಬಂಟರ ಸಂಘ ಬೆಂಗಳೂರು – ಮಹಿಳಾ ವಿಭಾಗ
# ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆ

॥ ಯತ್ರ ನಾರ್ಯಸ್ತು ಪೂಜ್ಯಂತೇ ರಮಂತೇ ತತ್ರದೇವತಾಃ ॥



ಬಂಟರ ಸಂಘ ಬೆಂಗಳೂರು ಮಹಿಳಾ ವಿಭಾಗದ ವತಿಯಿಂದ ಅಂತರ್‌ರಾಷ್ಟ್ರೀಯ ಮಹಿಳಾ ದಿನಾಚರಣೆ **“ಭವತೀ”** ವನಿತಾ ಭಾವ ಸಾರಥಿ ಕಾರ್ಯಕ್ರಮವು ಮಾರ್ಚ್ 08, 2025ರಂದು ವಿಜೃಂಭಣೆಯಿಂದ ನೆರವೇರಿತು.

ಬಣ್ಣ ಬಣ್ಣದ ಸೀರೆಯುಟ್ಟು ಶೃಂಗರಿಸಿಕೊಂಡಿದ್ದ ಉತ್ಸಾಹಿ ಮಹಿಳಾ ವಿಭಾಗದ ಸದಸ್ಯೆಯರೊಂದಿಗೆ ಸಂಘದ ಮಹಿಳಾ ಸದಸ್ಯರು, ಪದಾಧಿಕಾರಿಗಳು ಹಾಗೂ ಕಾರ್ಯಕಾರಿ ಸಮಿತಿ ಸದಸ್ಯರೊಂದಿಗೆ ಸ್ಥಳದ ಅಧಿದೇವತೆ ಶ್ರೀ ವರಸಿದ್ಧಿ ವಿನಾಯಕನ ಮಂದಿರದಲ್ಲಿ ಪೂಜೆ ಸಲ್ಲಿಸಿ ಕಾರ್ಯಕ್ರಮಕ್ಕೆ ಚಾಲನೆ ನೀಡಿ ರಾತ್ರಿ 9.30ರವರೆಗೆ ಅತೀ ಸುಂದರವಾಗಿ ಯಶಸ್ವಿಯಾಗಿ ನೆರವೇರಿತು.

ಮೊತ್ತ ಮೊದಲನೆಯದಾಗಿ ಸಂಘದ ಯುವತಿಯರು ಹಾಗೂ ಮಹಿಳಾ ಸದಸ್ಯೆಯರಿಂದ ಗಣೇಶನ ಸ್ತುತಿಯೊಂದಿಗೆ ಅದ್ದೂರಿಯಾಗಿ ಸ್ವಾಗತ ನೃತ್ಯವು ಸಭಿಕರ ಮನ ಸೂರೆಗೊಂಡಿತು.

ತದ ನಂತರ ಆಗಮಿಸಿದ ಮುಖ್ಯ ಅತಿಥಿಗಳು ಹಾಗೂ ಸಂಘದ ಗಣ್ಯರನ್ನು ನಿರೂಪಕಿ ಶ್ರೀಮತಿ ರೇವತಿ ಶೆಟ್ಟಿಯವರು ವೇದಿಕೆಗೆ ಬರಮಾಡಿಕೊಂಡರು. ಮುಖ್ಯ ಅತಿಥಿಯಾಗಿ ಡಾ. ಆರತಿ ಬಿ.ವಿ. ಮತ್ತು ಇನ್ನೋರ್ವ ಅತಿಥಿಯಾಗಿ ಶ್ರೀಮತಿ ಉಮಾ ರೆಡ್ಡಿಯವರನ್ನು ಆಹ್ವಾನಿಸಲಾಗಿತ್ತು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಸಂಘದ ಅಧ್ಯಕ್ಷರಾದ ಸಿಎ. ಅಶೋಕ್ ಶೆಟ್ಟಿ ಎಂ. ರವರ ಅನುಪಸ್ಥಿಯಲ್ಲಿ ಉಪಾಧ್ಯಕ್ಷರಾದ ಶ್ರೀ ಸಂತೋಷ್ ಶೆಟ್ಟಿ ಜೆ. ವಹಿಸಿಕೊಂಡಿದ್ದರು. ಇತರ ಗಣ್ಯರಾದ ಸಂಘದ ಗೌರವ ಕಾರ್ಯದರ್ಶಿ ಶ್ರೀ ವಿಜಯ್ ಜೆ. ಶೆಟ್ಟಿ ಹಾಲಾಡಿ, ಮಹಿಳಾ ಉಪಾಧ್ಯಕ್ಷೆ ಶ್ರೀಮತಿ ಕಾಂತಿ ಶೆಟ್ಟಿ, ಜೊತೆ ಕಾರ್ಯದರ್ಶಿ ಶ್ರೀಮತಿ ಜಯಶ್ರೀ ಸಿ. ರೈ, ಖಜಾಂಚಿ ಶ್ರೀ ಅಶೋಕ್ ಕುಮಾರ್ ಶೆಟ್ಟಿ. ಹೆಚ್. ಮಹಿಳಾ ವಿಭಾಗದ ಚೇರ್‌ಪರ್ಸನ್ ಶ್ರೀಮತಿ ಯೋಗ್ಯ ಎಲ್. ರೈ ಹಾಗೂ ಸಂಚಾಲಕಾರದ ಶ್ರೀಮತಿ ಮಲ್ಲಿಕಾ ಕೆ. ಶೆಟ್ಟಿ ಇವರುಗಳು ವೇದಿಕೆಯಲ್ಲಿ ಉಪಸ್ಥಿತರಿದ್ದರು.

ಶ್ರೀಮತಿ ಮೀರಾ ಕೆ. ಶೆಟ್ಟಿ, ಶ್ರೀಮತಿ ಅಕ್ಷತಾ ಶೆಟ್ಟಿ ಹಾಗೂ ಶ್ರೀಮತಿ ದೀಪಾ ಶೆಟ್ಟಿಯವರ ಸುಶ್ರಾವ್ಯ ಪ್ರಾರ್ಥನೆಯೊಂದಿಗೆ ಸಭಾಕಾರ್ಯಕ್ರಮ ಆರಂಭವಾಯಿತು.

ಚೇರ್‌ಪರ್ಸನ್ ಶ್ರೀಮತಿ ಯೋಗ್ಯ ಎಲ್. ರೈಯವರು ಪ್ರತಿಯೊಬ್ಬರನ್ನು ಉದ್ದೇಶಿಸಿ ಸ್ವಾಗತ ಭಾಷಣ ಮಾಡಿದರು. ವೇದಿಕೆಯಲ್ಲಿ ವಿರಾಜಿಸಿದ ಗಣ್ಯರೆಲ್ಲರೂ ಸೇರಿ ದೀಪ ಪ್ರಜ್ವಲನೆ ನೆರವೇರಿಸುವುದರೊಂದಿಗೆ ಮಹಿಳಾ ವಿಭಾಗದ ಸದಸ್ಯೆಯರಿಂದ ಬಂಟ ಗೀತೆಯನ್ನು ಹಾಡಲಾಯಿತು.

ಗೌರವ ಕಾರ್ಯದರ್ಶಿ ಶ್ರೀ ವಿಜಯ್ ಜೆ. ಶೆಟ್ಟಿ ಹಾಲಾಡಿಯವರು ಮಹಿಳಾ ದಿನಾಚರಣೆಯನ್ನು ಉದ್ದೇಶಿಸಿ ಮಾತನಾಡಿದರು.



ಮುಖ್ಯ ಅತಿಥಿಯಾಗಿ ಆಗಮಿಸಿದ ಡಾ। ಆರತಿ ಬಿ. ವಿ. ಇವರ ಪರಿಚಯ ಪತ್ರವನ್ನು ಶ್ರೀಮತಿ ಮಾಲಾ ಅರುಣ್ ಶೆಟ್ಟಿಯವರು ಓದಿ ಹೇಳಿದರು. ಗಣ್ಯರೆಲ್ಲ ಒಡಗೂಡಿ ಡಾ.ಆರತಿಯವರನ್ನು ಸನ್ಮಾನಿಸಲಾಯಿತು. ಡಾ. ಆರತಿಯವರು ಸಭೆಯನ್ನು ಉದ್ದೇಶಿಸಿ ಮಾತನಾಡುತ್ತಾ ಮಹಿಳೆಯರು ಸಮಾಜ ಹಾಗೂ ನಮ್ಮ ಸಂಸ್ಕೃತಿಯ ಜವಾಬ್ದಾರರು ನಮ್ಮ ದೇಶದ ಸಂಸ್ಕೃತಿಯನ್ನು ಉಳಿಸುವಲ್ಲಿ ಪಾತ್ರರಾಗಬೇಕು. ಭಾರತದ ಸಂಸ್ಕೃತಿ ಪ್ರಪಂಚದಲ್ಲೇ ಹೆಸರುವಾಸಿಯಾಗಿದೆ.

ನಮ್ಮ ಉಡುಗೆ ತೊಡುಗೆ, ದೇವರಲ್ಲಿ ಭಕ್ತಿ ಕುಟುಂಬದಲ್ಲಿ ಸಂಸ್ಕಾರ ಹಾಗೂ ದೇಶ ಪ್ರೇಮದ ಬಗ್ಗೆ ಅತಿಯಾದ ಕಾಳಜಿ ವಹಿಸಬೇಕು ಎಂದು ಒತ್ತಿ ಹೇಳಿದರು. ಅವರ ಮಾತುಗಳಿಗೆ ಸಭಿಕರು ಮಂತ್ರ ಮುಗ್ಧರಾಗಿದ್ದರು.

ಇನ್ನೋರ್ವ ಅತಿಥಿ ಶ್ರೀಮತಿ ಉಮಾ ರೆಡ್ಡಿಯವರ ಪರಿಚಯವನ್ನು ಶ್ರೀಮತಿ ಗೀತಾ ಅಶೋಕ್ ಶೆಟ್ಟಿ ವಿವರಿಸಿದರು. ಶ್ರೀಮತಿ ಉಮಾ ರೆಡ್ಡಿಯವರನ್ನು ವೇದಿಕೆಯಲ್ಲಿದ್ದ ಗಣ್ಯರೆಲ್ಲ ಸೇರಿ ಸನ್ಮಾನಿಸಿದರು. ಅವರು ಸಭೆಯನ್ನು ಉದ್ದೇಶಿಸಿ ಮಾತನಾಡುತ್ತಾ, ಮಹಿಳೆಯರು ತಮ್ಮ ಪ್ರತಿಭೆಯನ್ನು ಹೇಗೆ ಹೊರತರಬಹುದು, ಯಾವ ತರಹ ಸಾಧಕಿಯರಾಗಬಹುದು ಎಂಬುದಾಗಿ ಅನೇಕ ಮಹಿಳೆಯರ ಬಗ್ಗೆ ಅನೇಕ ವಿಷಯಗಳನ್ನು ಸಭೆಯ ಮುಂದಿಟ್ಟರು.



ತದನಂತರ ಮೂವರು ಸಾಧಕಿಯರನ್ನು ಗೌರವಿಸಲಾಯಿತು. ಮೊದಲನೆಯದಾಗಿ ಶ್ರೀಮತಿ ಶ್ಯಾಮಲ ಶೆಟ್ಟಿಯವರ ಸನ್ಮಾನ ಪತ್ರವನ್ನು ಮಾಜಿ ಉಪಾಧ್ಯಕ್ಷೆ ಶ್ರೀಮತಿ ಗೀತಾಂಜಲಿ ಡಿ. ಅಜಿಲರವರು ಓದಿ ತಿಳಿಸಿದರು. ನಮ್ಮವರೇ ಆದ ನಮ್ಮ ಸಂಘದ ಮಾಜಿ ಜೊತೆ ಕಾರ್ಯದರ್ಶಿ ಶ್ರೀಮತಿ ಶ್ಯಾಮಲ ಶೆಟ್ಟಿ ಇವರ ಕ್ರೀಡಾ ಕ್ಷೇತ್ರದ ರಾಷ್ಟ್ರೀಯ ಮತ್ತು ಅಂತಾರಾಷ್ಟ್ರೀಯ ಸಾಧನೆಯನ್ನು ಗುರುತಿಸಿ ಗೌರವಿಸಲಾಯಿತು.



ಇನ್ನೋರ್ವ ಸಾಧಕಿ ಶ್ರೀಮತಿ ಸುರೇಖಾ ಶೆಟ್ಟಿ ಇವರ ಸನ್ಮಾನ ಪತ್ರವನ್ನು ಶ್ರೀಮತಿ ಅಮೃತಾ ವಿ. ಶೆಟ್ಟಿಯವರು ಓದಿ ಹೇಳಿದರು. ಶ್ರೀಮತಿ ಸುರೇಖಾ ಶೆಟ್ಟಿಯವರು ಸಂಘದ ಮಾಜಿ ಕಾರ್ಯಕಾರಿ ಸಮಿತಿಯಲ್ಲಿ ದುಡಿದವರು. ಶಿಕ್ಷಣ ಕ್ಷೇತ್ರದಲ್ಲಿ ಇವರ ಸಾಧನೆ ಅಪಾರ. ಸಮಾಜ ಸೇವೆಯಲ್ಲೂ ಇವರು ಎತ್ತಿದ ಕೈ.




ಮತ್ತೋರ್ವ ಸಾಧಕಿ ಶ್ರೀಮತಿ ಅನುರಾಧಾ ಶೆಟ್ಟಿ ಇವರ ಸನ್ಮಾನ ಪತ್ರವನ್ನು ಶ್ರೀಮತಿ ಅನುರಾಧಾ ಎ. ಶೆಟ್ಟಿಯವರು ವಿವರಿಸಿದರು. ಶ್ರೀಮತಿ ಅನುರಾಧಾ ಇವರು ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಆಧುನಿಕ ಶೈಲಿಯ ವಿಧಾನದಲ್ಲಿ ಕೃಷಿಯನ್ನು ಮಾಡಿ ಅತ್ಯಂತ ಹೆಸರುವಾಸಿಯಾಗಿದ್ದಾರೆ.

ಮಹಿಳಾ ಉಪಾಧ್ಯಕ್ಷೆ ಶ್ರೀಮತಿ ಕಾಂತಿ ಶೆಟ್ಟಿಯವರು ತಮ್ಮ ಭಾಷಣದಲ್ಲಿ ಮಹಿಳಾ ದಿನಾಚರಣೆಯ ಮಹತ್ವವನ್ನು ಹಾಗೂ ಮಹಿಳೆಯರ ಪಾತ್ರವನ್ನು ಸಂಕ್ಷಿಪ್ತವಾಗಿ ವಿವರಿಸಿದರು.




ಶ್ರೀಮತಿ ಮಂಜುಶ್ರೀ ಅನೂಪ್ ಪೂಜಾರಿಯವರ ಕಿರು ಪರಿಚಯವನ್ನು ಶ್ರೀಮತಿ ವಿಜಯಲಕ್ಷ್ಮಿ ಎಸ್. ಶೆಟ್ಟಿಯವರು ಓದಿ ಹೇಳಿದರು. ಭಾರತೀಯ ರಕ್ಷಣಾ ಸೇವೆಯಲ್ಲಿ ಕರ್ತವ್ಯ ನಿರತರಾಗಿದ್ದಾಗ ವೀರ ಮರಣವನ್ನಪ್ಪಿದ ಶ್ರೀ ಅನೂಪ್ ಪೂಜಾರಿಯವರ ಪತ್ನಿ ಶ್ರೀಮತಿ ಮಂಜುಶ್ರೀ ಅನೂಪ್ ಪೂಜಾರಿಯವರಿಗೆ ಅವರ ಮಗುವಿನ ಭವಿಷ್ಯದ ವಿದ್ಯಾಭ್ಯಾಸಕ್ಕಾಗಿ ಮಹಿಳಾ ವಿಭಾಗದ ವತಿಯಿಂದ ರೂ.1 ಲಕ್ಷದ ಚೆಕ್ಕನ್ನು ಸಹಾಯಹಸ್ತವಾಗಿ ನೀಡಲಾಯಿತು. ಈ ಮೊತ್ತವನ್ನು ವಿಜಯನಗರ ಕ್ಷೇತ್ರದ ಶಾಸಕರಾದ ಶ್ರೀ ಎಂ. ಕೃಷ್ಣಪ್ಪನವರು ಉದಾರ ಮನಸ್ಸಿನಿಂದ ದೇಣಿಗೆಯಾಗಿ ನೀಡಿದ್ದಾರೆ. ಅನೂಪ್ ಪೂಜಾರಿಯವರ ಕರ್ತವ್ಯದ ತುಣುಕುಗಳ ವೀಡಿಯೋವನ್ನು ಸಭೆಗೆ ತೋರಿಸಲಾಯಿತು. ನೋಡುತ್ತಾ ಸಭಿಕರ ಕಣ್ಣುಗಳು ತುಂಬಿ ಬಂದವು.

ಸಭೆಯ ಅಧ್ಯಕ್ಷತೆಯನ್ನು ವಹಿಸಿದ್ದ ಸಂಘದ ಉಪಾಧ್ಯಕ್ಷರಾದ ಶ್ರೀ ಸಂತೋಷ್ ಶೆಟ್ಟಿ ಜೆ. ಇವರು ಸಭೆಯನ್ನುದ್ದೇಶಿಸಿ ಮಾತನಾಡಿದರು. ಕೊನೆಯದಾಗಿ ಮಹಿಳಾ ವಿಭಾಗದ ಸಂಚಾಲಕರಾದ ಶ್ರೀಮತಿ ಮಲ್ಲಿಕಾ ಕೆ. ಶೆಟ್ಟಿಯವರು ಪ್ರತಿಯೊಬ್ಬರಿಗೂ ಧನ್ಯವಾದ ಸಮರ್ಪಣೆ ಮಾಡಿದರು.

ನಂತರ ಸಂಘದ ಸದಸ್ಯ ಬಾಲಕಿಯರು, ಯುವತಿಯರು ಹಾಗೂ ಮಹಿಳಾ ವಿಭಾಗದ ಸದಸ್ಯೆಯರಿಂದ ವರ್ಣರಂಜಿತವಾದ ಸಾಂಸ್ಕೃತಿಕ ಕಾರ್ಯಕ್ರಮವು ಸಭಿಕರನ್ನು ರಂಜಿಸಿತು. ಈ ಅತ್ಯುತ್ತಮ ಸಾಂಸ್ಕೃತಿಕ ಕಾರ್ಯಕ್ರಮವನ್ನು ಅದ್ಭುತ ಶೈಲಿಯಲ್ಲಿ ರೂಪಿಸಿದ ನಿರ್ದೇಶಕರುಗಳಾದ ಶ್ರೀಮತಿ ಭಾಗ್ಯಶ್ರೀ ರೈ ಮತ್ತು ಶ್ರೀಮತಿ ಭವ್ಯಶ್ರೀ ರೈ ಸಹೋದರಿಯರನ್ನು ಹಾಗೂ ರಂಗ ಪಯಣ ತಂಡವನ್ನು ವೇದಿಕೆಯಲ್ಲಿ ಹೃತ್ಪೂರ್ವಕವಾಗಿ ಗೌರವಿಸಲಾಯಿತು.

ಕೊನೆಯದಾಗಿ ರಂಗ ಪಯಣ ತಂಡದವರಿಂದ ಉತ್ತರ ಕರ್ನಾಟಕ ಶೈಲಿಯ "ಗುಲಾಬಿ ಗ್ಯಾಂಗ್" ನಾಟಕವು ಪ್ರದರ್ಶಿಸಲ್ಪಟ್ಟಿತು. ಸಾಂಸ್ಕೃತಿಕ ಕಾರ್ಯಕ್ರಮದಲ್ಲಿ ಭಾಗವಹಿಸಿದ ಎಲ್ಲಾ ಸದಸ್ಯ ಬಾಂಧವರಿಗೆ ಹಾಗೂ ದಾನಿಗಳಿಗೆ ಸ್ಮರಣಿಕೆಯನ್ನು ವೇದಿಕೆಯಲ್ಲಿ ನೀಡಿ ಗೌರವಿಸಲಾಯಿತು.

ಪೂರ್ತಿ ಕಾರ್ಯಕ್ರಮದಲ್ಲಿ ಅತ್ಯಂತ ನಿರರ್ಗಳವಾಗಿ ಸುಲಲಿತ ಸುಂದರವಾಗಿ ನಿರೂಪಣೆಯನ್ನು ನಡೆಸಿಕೊಟ್ಟ ಶ್ರೀಮತಿ ರೇವತಿ ಶೆಟ್ಟಿಯವರನ್ನು ವೇದಿಕೆಯಲ್ಲಿ ಪ್ರೀತಿಪೂರ್ವಕವಾಗಿ ಗೌರವಿಸಲಾಯಿತು. ಉತ್ತಮ ಮಟ್ಟದ ಸಹಭೋಜನದೊಂದಿಗೆ ಕಾರ್ಯಕ್ರಮ ಸಮಾಪ್ತಿಗೊಂಡು ಎಲ್ಲರ ಪ್ರಶಂಸೆಗೆ ಪಾತ್ರವಾಯಿತು. ಈ ಕಾರ್ಯಕ್ರಮವನ್ನು ಯಶಸ್ವಿಗೊಳಿಸಲು ಪ್ರತ್ಯಕ್ಷ ಹಾಗೂ ಪರೋಕ್ಷವಾಗಿ ಸಹಕರಿಸಿದಂತಹ ಎಲ್ಲಾ ಆತ್ಮೀಯ ಬಾಂಧವರಿಗೆ ಮಹಿಳಾ ವಿಭಾಗದ ಪರವಾಗಿ ಮನದಾಳದ ಧನ್ಯವಾದಗಳು.

ನಮ್ಮ ಕಾರ್ಯಕ್ರಮಕ್ಕೆ ಸಹಕರಿಸಿದ "ಆಭರಣ ಜ್ಯುವೆಲ್ಲರ್ಸ್" ಇವರು ಅದೃಷ್ಟ ಚೀಟಿಯನ್ನು ಏರ್ಪಡಿಸಿ ಮೂರು ಬಹುಮಾನಗಳನ್ನು ವಿತರಿಸಿದರು.

**ಕಾರ್ಯಕ್ರಮಕ್ಕೆ ದೇಣಿಗೆ ನೀಡಿದವರು:–**

| | | |
|---|---|---|
| ಆಭರಣ ಜ್ಯುವೆಲ್ಲರ್ಸ್ | ಶ್ರೀ ಜಯಪ್ರಸಾದ್ ಶೆಟ್ಟಿ ಇರ್ಮಾಡಿ | ಶ್ರೀ ಅಮರನಾಥ ಹೆಗ್ಡೆ |
| ಮಾಂಡೋವಿ ಮೋಟಾರ್ಸ್ ಪ್ರೈ.ಲಿ. | ಶ್ರೀ ಉಮೇಶ್ ಶೆಟ್ಟಿ ಎಂ.ಬಿ. | ಶ್ರೀಮತಿ ವಿಜಯಲಕ್ಷ್ಮೀ ಎಸ್. ಶೆಟ್ಟಿ |
| ಶ್ರೀಮತಿ ಮಾಲತಿ ಅರುಣ್ ಶೆಟ್ಟಿ | ಶ್ರೀಮತಿ ಸರ್ವಾಣಿ ಜಿ. ರೈ | ಡಾ. ಜಗದೀಶ್ ವಿ. ಶೆಟ್ಟಿ |
| ಶ್ರೀಮತಿ ಲತಾ ಜೆ. ಶೆಟ್ಟಿ | ಶ್ರೀ ಜಗನ್ನಾಥ ಶೆಟ್ಟಿ | ಶ್ರೀ ನವೀನ್ ಭಂಡಾರಿ |
| ಶ್ರೀಮತಿ ಸುಜಾತ ಯು. ಹೆಗ್ಡೆ | ಶ್ರೀಮತಿ ಗೀತಾಂಜಲಿ ಎಸ್. ಶೆಟ್ಟಿ | ಶ್ರೀ ಚೇತನ್ ಹೆಗ್ಡೆ (1522) |
| ಶ್ರೀಮತಿ ಪೂಜಾ ಎಂ. ಶೆಟ್ಟಿ | ಶ್ರೀ ಅಮರನಾಥ ಶೆಟ್ಟಿ | ಶ್ರೀಮತಿ ಮಾನಸ ರಮಿತ್ ಶೆಟ್ಟಿ |
| ಶ್ರೀ ಪ್ರವೀಣ್‌ಚಂದ್ರ ಶೆಟ್ಟಿ | ಶ್ರೀ ಉದಯ್ ಶೆಟ್ಟಿ | ಶ್ರೀಮತಿ ಪ್ರಫುಲ್ಲಾ ಪುರುಷೋತ್ತಮ್ |
| ಸಿಎ. ಚಂದ್ರಶೇಖರ್ ಶೆಟ್ಟಿ | ಶ್ರೀ ಸುಶಾನ್ | ಶ್ರೀಮತಿ ಅಮೃತಾ ಪಿ. ರೈ. |
| ಶ್ರೀಮತಿ ಪುಷ್ಪಾ ಭೋಜರಾಜ್ ಶೆಟ್ಟಿ | ಶ್ರೀ ಪ್ರಕಾಶ್ ಶೆಟ್ಟಿ | ಶ್ರೀಮತಿ ದೀಪಿಕಾ ಉಮೇಶ್ ಶೆಟ್ಟಿ |
| ಸಿಎ. ವಿಜಯ್ ಶೆಟ್ಟಿ | ಶ್ರೀ ವೆಂಕಪ್ಪ ಹೆಗ್ಡೆ | ಶ್ರೀ ಮುರಲೀಧರ ಹೆಗ್ಡೆ |
| ಶ್ರೀಮತಿ ಮಲ್ಲಿಕಾ ಉದಯ್ ಶೆಟ್ಟಿ | ಶ್ರೀಮತಿ ವಾಣಿ ಜಗದೀಶ್ ಶೆಟ್ಟಿ | ಶ್ರೀ ಅನಿಲ್ ಕುಮಾರ್ ಜೆ. ಬಿ. |
| ಶ್ರೀ ಇಳಂಗೋವನ್ | ಶ್ರೀಮತಿ ಅಮೃತಾ ಎಸ್. ಶೆಟ್ಟಿ | ಶ್ರೀಮತಿ ಸುನೀತಾ ಸುಲಾಯ |
| ಶ್ರೀ ಕೀರ್ತನ್ ಶೆಟ್ಟಿ | ಶ್ರೀಮತಿ ಸರೋಜ ಶೆಟ್ಟಿ | ಶ್ರೀ ಕರುಣಾಕರ ಹೆಗ್ಡೆ ಆನಗಳ್ಳಿ |
| ಶ್ರೀ ಅಜಿತ್ ವಿ. ಶೆಟ್ಟಿ | ಶ್ರೀಮತಿ ಜ್ಯೋತಿ ಪ್ರಭಾ ಶೆಟ್ಟಿ | |

**ನೇರ ಪ್ರಾಯೋಜಕತ್ವ ನೀಡಿ ಸಹಕರಿಸಿದವರು:**

ಶ್ರೀ ಕೇಶವ ಶೆಟ್ಟಿ, ಸ್ವಾತಿ ರೆಸ್ಟೋರೆಂಟ್ : ದಿನಾಂಕ: 08.03.2025ರಂದು ಮಧ್ಯಾಹ್ನ ಭೋಜನದ ವ್ಯವಸ್ಥೆ
ಶ್ರೀಮತಿ ಅಮೃತಾ ವಿ. ಶೆಟ್ಟಿ : ದಿನಾಂಕ: 06.03.2025ರಂದು ಭೋಜನದ ವ್ಯವಸ್ಥೆ
ಶ್ರೀಮತಿ ಲಕ್ಷ್ಮೀ ಶೆಟ್ಟಿ, ಅಲಂಕಾರ್ ಇವೆಂಟ್ಸ್: ಹೂವಿನ ಅಲಂಕಾರ

**ಮಲ್ಲಿಕಾ ಕೆ. ಶೆಟ್ಟಿ**
ಸಂಚಾಲಕರು, ಮಹಿಳಾ ವಿಭಾಗ

**ಯೋಗ್ಯ ಎಲ್. ರೈ**
ಚೇರ್‌ಪರ್ಸನ್, ಮಹಿಳಾ ವಿಭಾಗ

# ಹೆಬ್ರಿ ಬಂಟರ ಸಂಘ–ಹೆಬ್ಬೇರಿ ಬಂಟ ರತ್ನ ಪ್ರಶಸ್ತಿ




ಬಂಟರ ಯಾನೆ ನಾಡವರ ಸಂಘ (ರಿ.) ಹೆಬ್ರಿ–ಅಜೆಕಾರು ವಲಯದ ವತಿಯಿಂದ ಹೆಬ್ಬೇರಿ ಬಂಟ ರತ್ನ ಪ್ರಶಸ್ತಿ ಪ್ರದಾನ ಸಮಾರಂಭವನ್ನು ದಿನಾಂಕ 08.03.2025ರಂದು ಶ್ರೀಮತಿ ಶೀಲಾ ಸುಭೋದ ಬಲ್ಲಾಳ್ (ಬಂಟರ ಭವನ) ಸಭಾಭವನ ಹೆಬ್ರಿಯಲ್ಲಿ ಆಯೋಜಿಸಲಾಗಿತ್ತು.

ಈ ಕಾರ್ಯಕ್ರಮದಲ್ಲಿ ನಮ್ಮ ಸಂಘದ ಅಧ್ಯಕ್ಷರಾದ ಸಿ.ಎ. ಅಶೋಕ್ ಶೆಟ್ಟಿ ಎಂ. ರವರಿಗೆ “ಹೆಬ್ಬೇರಿ ಬಂಟ ರತ್ನ ಪ್ರಶಸ್ತಿ”ಯನ್ನು ನೀಡಿ ಗೌರವಿಸಲಾಯಿತು. ಗೌರವವನ್ನು ಸ್ವೀಕರಿಸಿ, ಸಮ್ಮಾನಗಳು ನಮ್ಮ ಜವಾಬ್ದಾರಿಯನ್ನು ಹೆಚ್ಚಿಸುತ್ತದೆ. ಈ ನಿಟ್ಟಿನಲ್ಲಿ ಹೆಬ್ರಿ ಬಂಟರ ಸಂಘದಿಂದ ಹುಟ್ಟೂರಿನಲ್ಲಿ ಆದ ಸಮ್ಮಾನ ಅತ್ಯಂತ ಸಂತೋಷ ತಂದಿದೆ. ಹೆಬ್ರಿ ಸಂಘಕ್ಕೆ ಬೆಂಗಳೂರು ಬಂಟರ ಸಂಘದ ಮೂಲಕ ಮುಂದೆಯೂ ಸಹಕಾರವನ್ನು ನೀಡಲಾಗುವುದು ಎಂದರು.


# ಬಂಟರ ಸಂಘ ಬೆಂಗಳೂರು–ವೈದ್ಯಕೀಯ ಮತ್ತು ವಿಮಾ ಸಮಿತಿ – 2024–26



ಕಿಡ್ನಿ ಕ್ಯಾನ್ಸರ್ ಕಾಯಿಲೆಯಿಂದ ಚಿಕಿತ್ಸೆಯಲ್ಲಿರುವ ಹಾಲಾಡಿಯ ಅನುಷಾ ಶೆಟ್ಟಿಯವರಿಗೆ ಬೆಂಗಳೂರು ಬಂಟರ ಸಂಘದ ವೈದ್ಯಕೀಯ ಸಮಿತಿ, ಕಾರ್ಯಕಾರಿ ಸಮಿತಿ ಸದಸ್ಯರು, ಶ್ರೀ ಶಿವಾನಂದ ಶೆಟ್ಟಿ ಟಿ. ಮತ್ತು ದಾನಿಗಳು ನೀಡಿದ ಒಟ್ಟು ಮೊತ್ತ ರೂಪಾಯಿ 65,000/– ಚೆಕ್‌ನ್ನು ಪದಾಧಿಕಾರಿಗಳು, ಕಾರ್ಯಕಾರಿ ಸಮಿತಿ ಸದಸ್ಯರ ಸಮ್ಮುಖದಲ್ಲಿ ಅವರ ಪತಿ ಶ್ರೀ ಅಜಿತ್ ಕುಮಾರ್ ಶೆಟ್ಟಿಯವರಿಗೆ ಸಂಘದ ಕಛೇರಿಯಲ್ಲಿ ನೀಡಲಾಯಿತು.

**ಸುಪ್ರೀತ್ ಶೆಟ್ಟಿ**
ಸಂಚಾಲಕರು, ವೈದ್ಯಕೀಯ ಸಮಿತಿ

**ಪ್ರಶಾಂತ್ ಶೆಟ್ಟಿ ಎಸ್**
ಚೇರ್‌ಪರ್ಸನ್, ವೈದ್ಯಕೀಯ ಸಮಿತಿ


Dr. Sadashiv Shetty Kanyana
Chairman Heramba Industries
CMD Chemino Pharma Ltd, Mumbai
ನಮ್ಮ ಮಾರ್ಗದರ್ಶಕರು, ಪ್ರೀತಿ ಪಾತ್ರರು, ಹೃದಯದ ಬಂಧುಗಳೂ ಆಗಿರುವ ಶ್ರೀಯುತ ಸದಾಶಿವ್ ಶೆಟ್ಟಿ ಕನ್ಯಾನ ಇವರಿಗೆ ಮಂಗಳೂರಿನಲ್ಲಿ ಮಂಗಳೂರು ವಿಶ್ವವಿದ್ಯಾನಿಲಯವು ತಮ್ಮ ಘಟಿಕೋತ್ಸವ ಸಮಾರಂಭದಲ್ಲಿ ಈ ಸಾಲಿನ ಗೌರವ ಡಾಕ್ಟರೇಟ್ ಪದವಿಯನ್ನು ಪ್ರಧಾನ ಮಾಡಿರುತ್ತಾರೆ.
ಶೂನ್ಯದಿಂದ ಪ್ರಾರಂಭಿಸಿ ತಮ್ಮ ಸ್ವಂತ ಪರಿಶ್ರಮ ಮತ್ತು ದೇವರ ದಯೆಯಿಂದ ಇಂದು ಈ ಉನ್ನತ ಸ್ಥಾನಕ್ಕೇರಿದ್ದೀರಿ ನೀವು, ಏರಿದ ಏಣಿಯನ್ನು ಮರೆಯದೆ ಯಾವುದೇ ಪ್ರತಿಫಲ ಅಪೇಕ್ಷೆ ಇಲ್ಲದೆ ಶೈಕ್ಷಣಿಕ, ಧಾರ್ಮಿಕ, ವೈದ್ಯಕೀಯ ಸಹಾಯ ಹಸ್ತ, ಸಾಮಾಜಿಕ ಕ್ಷೇತ್ರಗಳ ಮೂಲಕ ಸುತ್ತಮುತ್ತಲಿನ ಸಮಾಜಕ್ಕೆ ತಮ್ಮದೇ ರೀತಿಯ ಸಹಾಯ ಹಸ್ತ ಚಾಚುತ್ತ ಬಂದಿರುತ್ತೀರಿ.
ತಮ್ಮ ಈ ಸಾಮಾಜಿಕ ಕಳಕಳಿಯ ಕಾಯಕವನ್ನು ಗುರುತಿಸಿ ಅರ್ಹವಾಗಿಯೇ ಗೌರವ ಡಾಕ್ಟರೇಟ್ ಪದವಿ ಲಭಿಸಿರುತ್ತದೆ ಎಂದು ತಿಳಿದು ಸಂಭ್ರಮ ಪಡುತ್ತಿದ್ದೇವೆ. ತಮ್ಮ ಈ ಜನೋಪಯೋಗಿ ಮತ್ತು ಪರೋಪಕಾರದ ಬದುಕು ನಮ್ಮೆಲ್ಲರಿಗೂ ಪ್ರೇರಣೆದಾಯಕವಾಗಿರಲಿ ಎಂದು ಬಯಸುತ್ತೇವೆ.
ಅನೇಕ ಯಶಸ್ವಿ ವ್ಯವಹಾರಿಕ ಕ್ಷೇತ್ರಗಳಲ್ಲಿ ತೊಡಗಿಸಿಕೊಂಡಿರುವ ತಾವು ನಮ್ಮ "ಪಂಚರಂಗಿ ಫಿಲಂಸ್" ಬೆಂಗಳೂರು ಇದರ ಪ್ರಮುಖ ನಿರ್ಮಾಪಕರಾಗಿದ್ದೀರಿ.
"ಡಾ॥ ಸದಾಶಿವ್ ಶೆಟ್ಟಿ"
ಯಾದ ತಮ್ಮನ್ನು ಈ ಶುಭಾವಸರದಲ್ಲಿ ಪ್ರೀತಿ ಪೂರ್ವಕವಾಗಿ ಹೃದಯಾಂತರದಿಂದ ಅಭಿನಂದಿಸುತ್ತಿದ್ದೇವೆ.
ಶ್ರೀಮತಿ ಜಯಶ್ರೀ ಮತ್ತು ಶ್ರೀ ಗುರು ಹೆಗ್ಡೆ.
ಮಾಣಿಕ್ ಹೆಗ್ಡೆ, ಭಗತ್ ಹೆಗ್ಡೆ.
PANCHARANGI FILMS
"ಪಂಚರಂಗಿ ಫಿಲಂಸ್" ಚಿತ್ರತಂಡದ
ನಿರ್ದೇಶಕರು, ಕಲಾವಿದರು, ತಂತ್ರಜ್ಞರು
ಹಾಗೂ ಎಲ್ಲಾ ಸಿಬ್ಬಂದಿ ವರ್ಗ.

ADVT.

# ಬಂಟರ ಸಂಘ ಬೆಂಗಳೂರು–ವಿದ್ಯಾರ್ಥಿ ವೇತನ ಮತ್ತು ಪ್ರಶಸ್ತಿ ಸಮಿತಿ 2024–26



ಬಂಟರ ಯಾನೆ ನಾಡವರ ಸಂಘ ಶಿರೂರು ಮತ್ತು ಯುವ ಬಂಟರ ಸಂಘ ಶಿರೂರು, ಶಿರೂರು, ಬೈಂದೂರು ತಾಲೂಕು ಉಡುಪಿ ಜಿಲ್ಲೆ, ಬೆಂಗಳೂರು ಬಂಟರ ಸಂಘದ ಹಾಗೂ ಜಾಗತಿಕ ಬಂಟರ ಸಂಘಗಳ ಒಕ್ಕೂಟದ ಸಹಯೋಗದೊಂದಿಗೆ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ, ವಿದ್ಯಾರ್ಥಿ ವೇತನ ವಿತರಣೆ ಕಾರ್ಯಕ್ರಮವನ್ನು ದಿನಾಂಕ 02.03.2025, ಭಾನುವಾರದಂದು ಶಿರೂರು ದಾಸನಾಡಿ ಶ್ರೀ ವೆಂಕಟರಮಣ ದೇವಸ್ಥಾನದಲ್ಲಿ ಆಯೋಜಿಸಲಾಗಿತ್ತು. ಬೆಂಗಳೂರು ಬಂಟರ ಸಂಘದ ವತಿಯಿಂದ ಪ್ರತಿಭಾ ಪುರಸ್ಕಾರ ವಿತರಣೆಗೆ ರೂ. 40,000/– ವನ್ನು ನೀಡಲಾಗಿದೆ. ಕಾರ್ಯಕ್ರಮದ ಮುಖ್ಯ ಅತಿಥಿಗಳಾಗಿ ಬೆಂಗಳೂರು ಬಂಟರ ಸಂಘದ ಅಧ್ಯಕ್ಷರಾದ ಸಿಎ. ಅಶೋಕ್ ಕುಮಾರ್ ಶೆಟ್ಟಿ ಎಂ., ಮತ್ತು ವಿದ್ಯಾರ್ಥಿವೇತನ ಮತ್ತು ಪ್ರಶಸ್ತಿ ಸಮಿತಿಯ ಚೇರ್‌ಪರ್ಸನ್ ಶ್ರೀ ಉಮೇಶ್ ಕುಮಾರ್ ಶೆಟ್ಟಿಯವರು ಭಾಗವಹಿಸಿದ್ದರು. ಶಿರೂರು ಬಂಟರ ಸಂಘದ ಅಧ್ಯಕ್ಷರಾದ ಶ್ರೀನಿವಾಸ ಶೆಟ್ಟಿಯವರು ಮಾತನಾಡಿ ಬೆಂಗಳೂರು ಬಂಟರ ಸಂಘದ ಅಧ್ಯಕ್ಷರೊಬ್ಬರು ಪ್ರಪ್ರಥಮ ಬಾರಿಗೆ ಶಿರೂರಿಗೆ ಆಗಮಿಸಿದ್ದು ನಮಗೆಲ್ಲರಿಗೂ ಅತೀವ ಆನಂದ ಹಾಗೂ ಸಂತೋಷವನ್ನುಂಟುಮಾಡಿದೆ. ಈ ದಿನ ಸರಿ ಸುಮಾರು 50ಕ್ಕೂ ಹೆಚ್ಚು ವಿದ್ಯಾರ್ಥಿಗಳು ವಿದ್ಯಾರ್ಥಿ ವೇತನ ಮತ್ತು ಪ್ರೋತ್ಸಾಹ ಧನದ ಸದುಪಯೋಗವನ್ನು ಪಡೆದುಕೊಂಡರು. ಬೆಂಗಳೂರು ಬಂಟರ ಸಂಘ ಕಳೆದ 10 ವರ್ಷಗಳಿಂದ ಶಿರೂರು ಬಂಟರ ಸಂಘಕ್ಕೆ ಪ್ರೋತ್ಸಾಹ ಧನವನ್ನು ನೀಡುತ್ತಾ ಬಂದಿದೆ ತಮಗೆ ತುಂಬು ಹೃದಯದ ಧನ್ಯವಾದಗಳು. ಸಂಘದ ಅಧ್ಯಕ್ಷರಾದ ಸಿಎ. ಅಶೋಕ್ ಶೆಟ್ಟಿ ಎಂ.ರವರು ಮಾತನಾಡಿ ಆರ್ಥಿಕವಾಗಿ ಹಿಂದುಳಿದ ವಿದ್ಯಾರ್ಥಿಗಳಿಗೆ ಸಂಕಲ್ಪ ಎಂಬ ಹೊಸ ಯೋಜನೆಯನ್ನು ತಂದಿದ್ದೀವೆ ಅದರ ಸದುಪಯೋಗವನ್ನು ಪಡೆದುಕೊಳ್ಳಲು ವಿನಂತಿಸಿದರು. ವಿದ್ಯಾರ್ಥಿಗಳಿಗೆ ವಿದ್ಯಾರ್ಥಿ ವೇತನವನ್ನು ಶ್ರೀ ಉಮೇಶ್ ಕುಮಾರ್ ಶೆಟ್ಟಿಯವರು ವಿತರಿಸಿದರು. ಉದ್ಘಾಟಕರಾಗಿ ಶ್ರೀ ಮಾಧವ ಶೆಟ್ಟಿಯವರು ಹಾಗೂ ಅತಿಥಿಗಳಾಗಿ ಸಾಲಗದ್ದೆ ಶ್ರೀ ಶಶಿಧರ ಶೆಟ್ಟಿ, ಶ್ರೀ ಎಸ್. ಹೆಚ್. ಶಿರೂರು ಬಂಟರ ಸಂಘದ ಮಾಜಿ ಅಧ್ಯಕ್ಷರಾದ ಶ್ರೀ ಸತೀಶ್ ಕುಮಾರ್ ಶೆಟ್ಟಿ ಮತ್ತು ಯುವ ವಿಭಾಗದ ಅಧ್ಯಕ್ಷರಾದ ಶ್ರೀ ಅಜಿತ್ ಕುಮಾರ್ ಶೆಟ್ಟಿಯವರು ವೇದಿಕೆಯಲ್ಲಿ ಉಪಸ್ಥಿತರಿದ್ದರು.



ಬಂಟರ ಯಾನೆ ನಾಡವರ ಸಂಘ ಹೊಸನಗರ ತಾಲೂಕು, ಶಿವಮೊಗ್ಗ ಜಿಲ್ಲೆ ಮತ್ತು ಬೆಂಗಳೂರು ಬಂಟರ ಸಂಘದ ಸಹಯೋಗದೊಂದಿಗೆ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ, ವಿದ್ಯಾರ್ಥಿ ವೇತನ ವಿತರಣೆ, ಅಂಗವಿಕಲರಿಗೆ ಪ್ರೋತ್ಸಾಹ ಧನ ಹಾಗೂ ಹೊಸನಗರ ತಾಲೂಕು ಮಟ್ಟದಲ್ಲಿ ಚುನಾವಣೆಯಲ್ಲಿ ಜಯಗಳಿಸಿದ ಬಂಟ ನಾಯಕರುಗಳಿಗೆ ಸನ್ಮಾನ ಕಾರ್ಯಕ್ರಮವನ್ನು ದಿನಾಂಕ 02.03.2025, ಭಾನುವಾರದಂದು ಹೊಸನಗರ ಶ್ರೀ ಗಣಪತಿ ದೇವಸ್ಥಾನದ ಸಭಾಭವನದಲ್ಲಿ ಆಯೋಜಿಸಲಾಗಿತ್ತು. ಬೆಂಗಳೂರು ಬಂಟರ ಸಂಘದ ವತಿಯಿಂದ ಪ್ರತಿಭಾ ಪುರಸ್ಕಾರ ವಿತರಣೆಗೆ ರೂ. 30,000/– ವನ್ನು ನೀಡಲಾಗಿದೆ. ಕಾರ್ಯಕ್ರಮದ ಮುಖ್ಯ ಅತಿಥಿಗಳಾಗಿ ಬೆಂಗಳೂರು ಬಂಟರ ಸಂಘದ ಅಧ್ಯಕ್ಷರಾದ ಸಿಎ. ಅಶೋಕ್ ಕುಮಾರ್ ಶೆಟ್ಟಿ ಎಂ., ವಿದ್ಯಾರ್ಥಿವೇತನ ಮತ್ತು ಪ್ರಶಸ್ತಿ ಸಮಿತಿಯ ಚೇರ್‌ಪರ್ಸನ್ ಶ್ರೀ ಉಮೇಶ್ ಕುಮಾರ್ ಶೆಟ್ಟಿಯವರು ಮತ್ತು ವಿವಾಹ ವೇದಿಕೆ ಸಮಿತಿಯ ಚೇರ್‌ಪರ್ಸನ್ ಶ್ರೀಮತಿ ಗೀತಾ ಶೆಟ್ಟಿಯವರು ಭಾಗವಹಿಸಿದ್ದರು. ಹೊಸನಗರ ಬಂಟರ ಸಂಘದ ಅಧ್ಯಕ್ಷರಾದ ಶ್ರೀ ದಿವಾಕರ ಶೆಟ್ಟಿಯವರು ಮಾತನಾಡಿ ಬೆಂಗಳೂರು ಬಂಟರ ಸಂಘವು ಮೊಟ್ಟ ಮೊದಲ ಬಾರಿಗೆ ಹೊಸನಗರಕ್ಕೆ ವಿದ್ಯಾರ್ಥಿ ವೇತನ, ವೈದ್ಯಕೀಯ ನೆರವು, ಮದುವೆಗೆ ಕರಿಮಣಿ ಸರವನ್ನು ನೀಡಿದ್ದೀರಿ. ಮುಂದೆಯೂ ನಿಮ್ಮ ಸಹಕಾರ ಹೀಗೆಯೇ

ಮುಂದುವರಿಯಲಿ ಹಾಗೂ ಬೆಂಗಳೂರು ಬಂಟರ ಸಂಘದ ಅಧ್ಯಕ್ಷರು ನಮ್ಮ ಪರಿಸರಕ್ಕೆ ಬಂದಿರುವುದು ನಮ್ಮೆಲ್ಲರಿಗೂ ಬಹಳ ಸಂತೋಷವನ್ನುಂಟುಮಾಡಿದೆ ಎಂದು ಶ್ಲಾಘಿಸಿದರು.

ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ಬೆಂಗಳೂರು ಬಂಟರ ಸಂಘದ ಅಧ್ಯಕ್ಷರು ನನಗೂ ಈ ಭಾಗಕ್ಕೂ ನಂಟನ್ನು ವಿವರಿಸಿ ಬಾಲ್ಯದ ಜೀವನವನ್ನು ನೆನಪಿಸಿಕೊಂಡರು ಮತ್ತು ಇನ್ನು ಮುಂದೆ ನಿಮ್ಮ ಜೊತೆ ಬೆಂಗಳೂರು ಬಂಟರ ಸಂಘ ಸದಾ ನಿಲ್ಲುತ್ತದೆ ಎಂದು ನುಡಿದರು. ವಿದ್ಯಾರ್ಥಿ ವೇತನ ಸಮಿತಿಯ ಚೇರ್‌ಪರ್ಸನ್ ಮಾತನಾಡಿ ಬೆಂಗಳೂರು ಬಂಟರ ಸಂಘದಲ್ಲಿ ನೀಡಲಾಗುವ ಎಲ್ಲಾ ಯೋಜನೆಗಳ ವಿವರವನ್ನು ವಿವರವಾಗಿ ವಿವರಿಸಿದರು. ಇದೇ ಊರಿನವರಾದ ವಿವಾಹ ವೇದಿಕೆಯ ಚೇರ್‌ಪರ್ಸನ್ ಮಾತನಾಡಿ ಬಂಟರ ಸಂಘದ ಸದಸ್ಯತ್ವದ ಬಗ್ಗೆ ಮತ್ತು ವಿವಾಹ ವೇದಿಕೆಯ ಕುರಿತಾದ ಮಾಹಿತಿಯನ್ನು ನೀಡಿದರು.

**ಸುಧಾಕರ ಶೆಟ್ಟಿ ಹಟ್ಟಿಯಂಗಡಿ**
ಸಂಚಾಲಕರು,
ವಿದ್ಯಾರ್ಥಿ ವೇತನ ಮತ್ತು ಪ್ರಶಸ್ತಿ ಸಮಿತಿ

**ಉಮೇಶ್ ಕುಮಾರ್ ಶೆಟ್ಟಿ**
ಚೇರ್‌ಪರ್ಸನ್,
ವಿದ್ಯಾರ್ಥಿ ವೇತನ ಮತ್ತು ಪ್ರಶಸ್ತಿ ಸಮಿತಿ

## ಪದಬಂಧ – 6

| | | | | | | | | |
|---|---|---|---|---|---|---|---|---|
| 1 | | 2 | ■ | 3 | ■ | 4 | | 5 |
| | ■ | 6 | | | | | ■ | |
| 7 | 8 | ■ | ■ | ■ | ■ | ■ | 9 | |
| ■ | | ■ | 10 | | 11 | ■ | | ■ |
| 12 | | | | ■ | 13 | | | |
| ■ | | ■ | 14 | 15 | | ■ | | ■ |
| 16 | | ■ | ■ | | ■ | ■ | 17 | 18 |
| | ■ | 19 | | | | 20 | ■ | |
| 21 | | | ■ | | ■ | 22 | | |

**ಎಡದಿಂದ ಬಲಕ್ಕೆ**

1. ಸಾಕ್ಷರನ ಮುಂದಿರುವ ಅಸುರ (3)
4. ನಿಮಗೇಕೆ ವಾದ ಗಾಳಿಯಾಡದ ಜಾಗದಲ್ಲಿ (3)
6. ಯಾವುದೇ ತಪ್ಪು ಮಾಡದ ನಿರ್ದೋಷಿ (5)
7. ನಿನಗಾಗಿ ಇಟ್ಟಿರುವ ಲಕ್ಷ್ಯ (2)
9. ಸರಸ್ವತಿಯ ಕೊರಳಲ್ಲಿನ ಹಾರ (2)
10. ಕುಮಾರಿ ಧರಿಸಿದ ರವಿಕೆ (3)
12. ಹೊಂಗಿರಣ ಮೂಡುವ ಸಮಯದಲ್ಲಿ ಬಿದ್ದ ಸುಂದರ ಸ್ವಪ್ನ (4)
13. ಬಟ್ಟೆ ತೊಳೆಯುವುದರಲ್ಲಿ ಮಗ್ನನಾದ ರಜಕ (4)
14. ಮರವೇರಿದ ಭೀಕರ ಮೊಸಳೆ (3)
16. ಕರಾವಳಿಗರು ಆಚರಿಸುವ ಸೌರಮಾನ ಯುಗಾದಿ (2)
17. ಪ್ರಯತ್ನಪೂರ್ವಕವಾಗಿ ಇಂದ್ರಿಯಗಳನ್ನು ಹಿಡಿತದಲ್ಲಿಟ್ಟುಕೊಂಡ ಮುನಿ (2)
19. ಎಣಿಸುವ ಅಂಖ್ಯೆಯನ್ನು ಸೂಚಿಸುವ ಪದ (5)
21. ಪದವಿ ಗಳಿಸಿದವನ ಕೊರಳಿಗೆ ಹಾಕಿದ ಬಿಲ್ಲೆ (3)
22. ಹತ್ತು ವರ್ಷಗಳ ಅವಧಿ (3)

**ಮೇಲಿನಿಂದ ಕೆಳಕ್ಕೆ**

1. ಕಳ್ಳ ಸಿಕ್ಕಿಹಾಕಿಕೊಂಡಿದ್ದು ಈ ಹೊತ್ತಿನಲ್ಲಿ (3)
3. ವ್ರತ, ನಿಯಮ ಅನುಷ್ಠಾನಕ್ಕಾಗಿ ಮಾಡುವ ಧ್ಯಾನ (2)
4. ನಿಧಾನವಾಗಿ ಹುಡುಕಿದಾಗ ಸಿಕ್ಕ ಸಂಪತ್ತು (2)
5. ತವರು ಮನೆಯಲ್ಲಿರುವ ಲೋಹ (3)
8. ಗಹನವಾದ ಚರ್ಚೆಯ ಮಧ್ಯೆ ಗಟ್ಟಿಯಾದ ನಗು (5)
9. ಸಚಿವರು ಕಾರ್ಯ ನಿರ್ವಹಿಸಲು ವ್ಯವಸ್ಥೆಗೊಳಿಸಿದ ಕಛೇರಿ (5)
10. ಕುಮಾರಿ ಸುಹಾಸಿನಿ ಹಿಡಿದು ತಂದ ಹೂವು (3)
11. ಸಮರಸ ಜೀವನಕ್ಕೆ ತೊಡಕ್ಕುಂಟುಮಾಡುವ ಯುದ್ಧ (3)
15. ಮೂಡಣದಲ್ಲಿ ಮೂಡಿದ ರವಿ ಚದುರಿಕೊಂಡಿದ್ದಾನೆ (4)
16. ಭಿನ್ನ ರೀತಿಯಲ್ಲಿ ಮಾಡಿಕೊಂಡ ವಿಜ್ಞಾಪನೆ (3)
18. ಊರೂರು ತಿರುಗಿ ದಣಿದ ಭಿಕ್ಷುಕ (3)
19. ಸಂಕಟದಿಂಡ ದಾಳಿದ ಕಾಲ್ಸೇತುವೆ (2)
20. ದಡಕ್ಕನೆ ತೆರೆದ ಬಾಗಿಲು (2)

**ಕಳೆದ ಸಂಚಿಕೆಯ ಪದಬಂಧ –5 ರ ಸರಿ ಉತ್ತರ**

| | | | | | | | | |
|---|---|---|---|---|---|---|---|---|
| 1 ಲ | ■ | 2 ಕ | ನ್ಯಾ | 3 ಕು | ಮಾ | 4 ರಿ | ■ | 5 ಮ |
| 6 ಹ | ರ | ದ | ■ | ಲ | ■ | 7 ಪು | ತ್ಥ | ಳಿ |
| ರಿ | ■ | ■ | ■ | ಪ | ■ | ■ | ■ | ಗೆ |
| ■ | ■ | 8 ಪ್ರ | ಗ | ತಿ | ಕ | ರ | ■ | ■ |
| 9 ಕ | ವಿ | ತಾ | ■ | ■ | ■ | 10 ಜ | ನ | ನಿ |
| ■ | ■ | 11 ಪ | ರಿ | 12 ಕ | ರ | ತ | ■ | ■ |
| 13 ಗು | ■ | ■ | ■ | ಮಂ | ■ | ■ | ■ | 14 ಸಂ |
| 15 ಮಾ | ಲೀ | 16 ಕ | ■ | ಡ | ■ | 17 ಪು | ನೀ | ತ |
| ನಿ | ■ | 18 ಮಂ | ಗ | ಲ | ಸೂ | ತ್ರ | ■ | ಸ |

## ಅಭಿನಂದನೆಗಳು



**ಡಾ. ನಿಕಿನ್ ಸಿ. ಶೆಟ್ಟಿ**

ಕರ್ನಾಟಕ ರಾಜ್ಯ ಸರ್ಕಾರಿ ವೈದ್ಯಾಧಿಕಾರಿಗಳ ಸಂಘದ ಅಧ್ಯಕ್ಷರಾಗಿ ಡಾ. ನಿಕಿನ್ ಸಿ. ಶೆಟ್ಟಿಯವರು ಆಯ್ಕೆಯಾಗಿದ್ದಾರೆ. ಇತ್ತೀಚೆಗೆ ನಡೆದ ಸಂಘದ ಚುನಾವಣೆಯಲ್ಲಿ ಅಭೂತಪೂರ್ವ ಗೆಲುವು ಸಾಧಿಸುವ ಮೂಲಕ ಸಂಘದ 54 ವರ್ಷಗಳ ಇತಿಹಾಸದಲ್ಲಿ ಪ್ರಥಮ ಬಾರಿಗೆ ಬಂಟರೊಬ್ಬರು ಈ ಹುದ್ದೆಯನ್ನು ಪಡೆದಿರುವ ಕೀರ್ತಿಗೆ ಪಾತ್ರರಾಗಿದ್ದಾರೆ.

ಡಾ. ಶೆಟ್ಟಿಯವರು ಪ್ರಸ್ತುತ ಉಡುಪಿಯ ಅಜರಕಾಡು ಸರ್ಕಾರಿ ಜಿಲ್ಲಾ ಆಸ್ಪತ್ರೆಯಲ್ಲಿ ಫಿಸಿಶಿಯನ್ ಆಗಿ ಸೇವೆ ಸಲ್ಲಿಸುತ್ತಿದ್ದಾರೆ. ಉತ್ತಮ ಸಂಘಟಕರಾಗಿ KGMOA ನ ವಿವಿಧ ಹುದ್ದೆಗಳಲ್ಲಿ ಕಾರ್ಯನಿರ್ವಹಿಸಿರುವ ಇವರು ಈಗ ಸಂಘದ ರಾಜ್ಯಾಧ್ಯಕ್ಷ ಜವಾಬ್ದಾರಿಯನ್ನು ಯಶಸ್ವಿಯಾಗಿ ನಿರ್ವಹಿಸಲಿ ಎಂಬ ಹಾರೈಕೆ ನಮ್ಮದು.

ಡಾ. ನಿಕಿನ್ ಶೆಟ್ಟಿ ಅವರ ಪತ್ನಿ ಅಮ್ನಾ ಹೆಗ್ಡೆ ಕೂಡ ಉಡುಪಿಯ ಜಿಲ್ಲಾ ಸರ್ಕಾರಿ ಆಸ್ಪತ್ರೆಯಲ್ಲಿ ರೇಡಿಯಾಲಜಿಸ್ಟ್ ಆಗಿ ಸೇವೆ ಸಲ್ಲಿಸುತ್ತಿದ್ದಾರೆ. ಡಾ. ನಿಕಿನ್ ಸಿ. ಶೆಟ್ಟಿಯವರು ಬೆಂಗಳೂರು ಬಂಟರ ಸಂಘದ ಸದಸ್ಯರಾದ ಕುಂದಾಪುರ ತಾಲೂಕಿನ ಕಂದಾವರ ಶ್ರೀ ಚಂದ್ರಶೇಖರ ಶೆಟ್ಟಿ (ನಿವೃತ್ತ ಹಿರಿಯ ಅಧಿಕಾರಿ ವಿಜಯ ಬ್ಯಾಂಕ್) ಮತ್ತು ಗಿಳಿಯಾರು ಶ್ರೀಮತಿ ನಿರ್ಮಲಾ ಸಿ. ಶೆಟ್ಟಿಯವರ ಸುಪುತ್ರ.

ಬಂಟರ ಸಂಘ ಬೆಂಗಳೂರು
BUNTS' SANGHA BANGALORE

**No. 324, Chord Road, Vijayanagar, Bangalore – 40 | Tel.: 080-23399636 / 23399323**
**Email:** buntsanghabangalore@yahoo.in, info@buntsanghablr.com, | **Website:** www.buntsanghablr.com

## 'ಸಂಕಲ್ಪ'

### "ಶಿಕ್ಷಣದಿಂದ ಸಂಪನ್ನತೆ...... ಇದೇ ನಮ್ಮ ಸಂಕಲ್ಪ"

ಬೆಂಗಳೂರು ಬಂಟರ ಸಂಘವು ಗ್ರಾಮೀಣ ಪ್ರದೇಶದ ಪ್ರತಿಭಾನ್ವಿತ ವಿದ್ಯಾರ್ಥಿಗಳನ್ನು ಗುರುತಿಸಿ ಎರಡು ವರ್ಷದ ಉಚಿತ ಪಿಯುಸಿ ಶಿಕ್ಷಣವನ್ನು ನೀಡುವ ಯೋಜನೆಯೇ ಸಂಕಲ್ಪ.

ಆರ್ಥಿಕವಾಗಿ ಸಂಕಷ್ಟದಲ್ಲಿರುವ ಪ್ರತಿಭಾನ್ವಿತ ಬಂಟ ವಿದ್ಯಾರ್ಥಿಗಳಿಗೆ ಬಂಟರ ಸಂಘ ಬೆಂಗಳೂರು ಆರ್.ಎನ್.ಎಸ್. ವಿದ್ಯಾನಿಕೇತನ – II ಸಂಸ್ಥೆಯಲ್ಲಿ ಉಚಿತ ಪಿಯುಸಿ ಶಿಕ್ಷಣ (ಸೈನ್ಸ್ ಮತ್ತು ಕಾಮರ್ಸ್) ಹಾಗೂ ವಸತಿ ಸೌಲಭ್ಯ ಪಡೆಯಲು ಸುವರ್ಣಾವಕಾಶ.

ನಮ್ಮ ಹಿರಿಯರು ಹಾಕಿಕೊಟ್ಟ ಚಾರಿಟೇಬಲ್ ನೆಲೆಯಲ್ಲಿ ಬಂಟರ ಸಂಘ ಬೆಂಗಳೂರು ಕಳೆದ 33 ವರ್ಷಗಳಲ್ಲಿ ನಡೆದು ಬಂದ ದಾರಿಯನ್ನು ವಿಶ್ಲೇಷಿಸಿದಾಗ ಸಾವಿರಾರು ವಿದ್ಯಾರ್ಥಿಗಳಿಗೆ ಉಚಿತ ವಿದ್ಯಾದಾನ ನೀಡಿ ಸಮಾಜದ ಮಕ್ಕಳು ಮುಂಚೂಣಿಯಲ್ಲಿ ಬರುವಂತೆ ನಿರಂತರ ಪ್ರಯತ್ನ ನಡೆದಿದೆ. ಹೊಸತನದ ಹುಡುಕಾಟದಲ್ಲಿ ಬಂಟರ ಸಂಘ ಆರ್.ಎನ್.ಎಸ್. ವಿದ್ಯಾನಿಕೇತನ–II 9 ಎಕ್ರೆಗಳಿಗೂ ಮೀರಿದ ಸಂಕೀರ್ಣ. ನಗರದ ಜಂಜಾಟದಿಂದ ಹೊರಗಿರುವ ಪ್ರಕೃತಿಯ ಶಾಂತ ವಾತಾವರಣದಲ್ಲಿ ವಿದ್ಯಾರ್ಜನೆಗೆ ಹೇಳಿ ಮಾಡಿಸಿದ ತಾಣ. ಈಗಾಗಲೇ 4 ವರ್ಷದಲ್ಲಿ ಸಂಕಲ್ಪದಿಂದ 200ಕ್ಕೂ ಮಿಕ್ಕಿದ ಗ್ರಾಮೀಣ ಪ್ರತಿಭಾನ್ವಿತ ವಿದ್ಯಾರ್ಥಿಗಳು ಇಲ್ಲಿನ ಪ್ರಯೋಜನ ಪಡೆದು ಮುನ್ನಡೆ ಸಾಧಿಸಿದ್ದಾರೆ.

ಪ್ರಸಕ್ತ ಸಾಲಿನಲ್ಲಿ 2025–26ರಲ್ಲಿ ಆಯ್ಕೆ ಪ್ರಕ್ರಿಯೆ ಹಲವು ನಿಬಂಧನೆಗಳೊಂದಿಗೆ ಕಾರ್ಯಗತವಾಗಲಿದೆ. 10ನೇ ತರಗತಿಯಲ್ಲಿ ಉನ್ನತ ಶ್ರೇಣಿಯಲ್ಲಿ ಉತ್ತೀರ್ಣರಾಗುವ ರಾಜ್ಯದ ವಿವಿಧ ಭಾಗಗಳಲ್ಲಿ ವಾಸಿಸುತ್ತಿರುವ ಬಂಟ ಸಮುದಾಯದ ಒಟ್ಟು 60 (ವಿಜ್ಞಾನ ವಿಭಾಗಕ್ಕೆ 40 ಹಾಗೂ ವಾಣಿಜ್ಯ ವಿಭಾಗಕ್ಕೆ 20 ವಿದ್ಯಾರ್ಥಿಗಳು) ಪ್ರತಿಭಾನ್ವಿತ ವಿದ್ಯಾರ್ಥಿಗಳಿಗೆ ಬಂಟರ ಸಂಘ ಆರ್.ಎನ್.ಎಸ್. ವಿದ್ಯಾನಿಕೇತನ–II ಸಂಸ್ಥೆಯಲ್ಲಿ ಉಚಿತ ಪಿಯುಸಿ ಶಿಕ್ಷಣವನ್ನು **'ಸಂಕಲ್ಪ'** ಯೋಜನೆಯಡಿಯಲ್ಲಿ ನೀಡಲು ತೀರ್ಮಾನಿಸಲಾಗಿದೆ.

**ಅರ್ಜಿ ಸಲ್ಲಿಸಲು ನಿಯಮ/ ಮಾನದಂಡಗಳು:**

2024–25 ನೇ ಸಾಲಿನಲ್ಲಿ 10ನೇ ತರಗತಿ ಶಿಕ್ಷಣ ಪೂರೈಸಿದ, ರಾಜ್ಯದ ವಿವಿಧ ಭಾಗಗಳಲ್ಲಿ ವಾಸಿಸುತ್ತಿರುವ ಆರ್ಥಿಕವಾಗಿ ಸಂಕಷ್ಟದಲ್ಲಿರುವ ಪ್ರತಿಭಾವಂತ ಅಭ್ಯರ್ಥಿಗಳು (ಸಂಘದ ಸದಸ್ಯರು ಹಾಗೂ ಸದಸ್ಯೇತರರು) ಅರ್ಜಿ ಸಲ್ಲಿಸಬಹುದಾಗಿದೆ. ಅರ್ಜಿ ಸಲ್ಲಿಸಲು **ಕೊನೆಯ ದಿನಾಂಕ 20.04.2025**.

- ಪ್ರವೇಶ ಪರೀಕ್ಷೆಗಳು **ದಿನಾಂಕ 27.04.2025, ಭಾನುವಾರ ಬೆಳಿಗ್ಗೆ 9.30**ಕ್ಕೆ ಬಂಟ್ವಾಳ, ಪುತ್ತೂರು, ಬ್ರಹ್ಮಾವರ, ಬೈಂದೂರು, ತೀರ್ಥಹಳ್ಳಿ, ಬೆಳ್ತಂಗಡಿ, ಕುಂದಾಪುರ ಮತ್ತು ಕಾರ್ಕಳದಲ್ಲಿ ಸ್ಥಳೀಯ ಬಂಟರ ಸಂಘಗಳ ಸಹಯೋಗದೊಂದಿಗೆ ಹಾಗೂ ಬೆಂಗಳೂರಿನ ಬಂಟರ ಸಂಘ ಆರ್.ಎನ್.ಎಸ್. ವಿದ್ಯಾನಿಕೇತನ ವಿಜಯನಗರ, ಬೆಂಗಳೂರು–560040 ನಲ್ಲಿ ಏಕಕಾಲದಲ್ಲಿ ನಡೆಯುತ್ತದೆ.
- ಪ್ರವೇಶ ಪರೀಕ್ಷೆಯಲ್ಲಿ ಪ್ರಥಮ ಹಂತದಲ್ಲಿ ಆಯ್ಕೆಯಾದ ಅಭ್ಯರ್ಥಿಗಳ ಮನೆಗೆ ಭೇಟಿ ನೀಡಿ ಕೌಟುಂಬಿಕ ಹಿನ್ನೆಲೆಯನ್ನು ಪರಿಶೀಲಿಸಿ, ನಂತರ ಅರ್ಹ ಅಭ್ಯರ್ಥಿಗಳನ್ನು ಆಯ್ಕೆ ಮಾಡಿ ಅಂತಿಮವಾಗಿ ಮೌಖಿಕ ಸಂದರ್ಶನಕ್ಕೆ ಆಯ್ಕೆ ಮಾಡಲಾಗುವುದು. ಪೋಷಕರು ಬಿ.ಪಿ.ಎಲ್./ ಅಂತ್ಯೋದಯ ಪಡಿತರಚೀಟಿ ಹೊಂದಿದ್ದು, ಅದರಲ್ಲಿ ಅಭ್ಯರ್ಥಿಯ ಹೆಸರು ಕಡ್ಡಾಯವಾಗಿ ಇರತಕ್ಕದ್ದು.
- 2024–25 ನೇ ಸಾಲಿನಲ್ಲಿ 10ನೇ ತರಗತಿ ಶಿಕ್ಷಣ ಪಡೆಯುತ್ತಿರುವ/ ಪಡೆದ ಪೂರ್ವಸಿದ್ಧತಾ ಪರೀಕ್ಷೆಯಲ್ಲಿ ಶೇಕಡಾ 70 ಹಾಗೂ ಅದಕ್ಕಿಂತ ಮೇಲ್ಪಟ್ಟ ವಿದ್ಯಾರ್ಥಿಗಳು ಪ್ರಥಮ ಪಿಯುಸಿ ಕೋರ್ಸ್‌ಗೆ (ಸೈನ್ಸ್ ಮತ್ತು ಕಾಮರ್ಸ್) ಅರ್ಜಿ ಸಲ್ಲಿಸಬಹುದು.

- ಮುಖ್ಯೋಪಾಧ್ಯಾಯರ ಧೃಡೀಕೃತ ಸಹಿಯಿರುವ ಪೂರ್ವಸಿದ್ಧತಾ ಪರೀಕ್ಷೆಯ ಅಂಕಪಟ್ಟಿಯನ್ನು ಕಡ್ಡಾಯವಾಗಿ ಲಗತ್ತಿಸತಕ್ಕದ್ದು.
- ಕ್ರೀಡೆ ಅಥವಾ ಇನ್ನಾವುದೇ ಕ್ಷೇತ್ರದಲ್ಲಿ ರಾಷ್ಟ್ರ/ ರಾಜ್ಯ ಮಟ್ಟದಲ್ಲಿ ಸಾಧನೆಗೈದ ವಿದ್ಯಾರ್ಥಿಗಳಿಗೆ ವಿಶೇಷ ಆದ್ಯತೆ ಕಲ್ಪಿಸಲಾಗುವುದು.
- ಅಂತಿಮವಾಗಿ ಆಯ್ಕೆಗೊಂಡ ಅಭ್ಯರ್ಥಿಗಳಿಗೆ **ಬಂಟರ ಸಂಘ ಆರ್.ಎನ್.ಎಸ್. ವಿದ್ಯಾನಿಕೇತನ–II** ಸಂಸ್ಥೆಯಲ್ಲಿ (ಯಲಚಗುಪ್ಪೆ ಗ್ರಾಮ, ತಾವರೆಕೆರೆ ಹೋಬಳಿ, ಬೆಂಗಳೂರು ದಕ್ಷಿಣ ತಾಲೂಕು) 2 ವರ್ಷದ ಉಚಿತ ಶಿಕ್ಷಣ, ವಸತಿಯೊಂದಿಗೆ ವಿಜ್ಞಾನ ವಿಭಾಗದ ಆಸಕ್ತ ವಿದ್ಯಾರ್ಥಿಗಳಿಗೆ ಇಂಜಿನಿಯರಿಂಗ್ ಮತ್ತು ವೈದ್ಯಕೀಯ ಮೊದಲಾದ ಕೋರ್ಸ್‌ಗೆ ಅರ್ಹತೆ ಪಡೆಯಲು ಅಗತ್ಯವಿರುವ **ಸಿ.ಇ.ಟಿ.** ಮತ್ತು **ನೀಟ್** ಪರೀಕ್ಷೆಗಳಿಗೆ ಉಚಿತ ಕೋಚಿಂಗ್ ನೀಡಲಾಗುವುದು.
- ಆಯ್ಕೆಯಾದ ಅಭ್ಯರ್ಥಿಗಳು ಎರಡು ವರ್ಷಗಳ ಅವಧಿಯನ್ನು ಪೂರ್ತಿಗೊಳಿಸತಕ್ಕದ್ದು. ಎರಡು ವರ್ಷಗಳ ಅವಧಿಯ ಮಧ್ಯದಲ್ಲಿ (ಯಾವುದೇ ಕಾರಣಕ್ಕೂ) ಪೂರ್ತಿಗೊಳಿಸದಿದ್ದಲ್ಲಿ ಅಭ್ಯರ್ಥಿಗಳೇ ಶಾಲಾ ಶುಲ್ಕ ರೂ. 1,50,000/– ವನ್ನು ಪಾವತಿಸತಕ್ಕದ್ದು.
- ಅರ್ಹ ಅಭ್ಯರ್ಥಿಗಳು ಭರ್ತಿ ಮಾಡಿದ ಅರ್ಜಿಯನ್ನು ಸೂಕ್ತ ದಾಖಲೆಗಳೊಂದಿಗೆ (ಬಿಪಿಎಲ್/ ಅಂತ್ಯೋದಯ ಕಾರ್ಡ್, ವಿಳಾಸ ಧೃಢೀಕರಣ) ಬೆಂಗಳೂರು ಬಂಟರ ಸಂಘದ ಕಛೇರಿಗೆ ಖುದ್ದಾಗಿ/ಪೋಸ್ಟ್ ಮೂಲಕ ದಿನಾಂಕ 20.04.2025ರ ಒಳಗಾಗಿ ಅರ್ಜಿಯನ್ನು ಸಲ್ಲಿಸಬಹುದಾಗಿದೆ.
- ಹೆಚ್ಚಿನ ಮಾಹಿತಿಗಾಗಿ ಈ ಕೆಳಗಿನ ಸಂಕಲ್ಪ ಪರೀಕ್ಷಾ ವಲಯದ ಕೊ–ಆರ್ಡಿನೇಟರ್‌ಗಳ ಮೊಬೈಲ್ ನಂಬರ್‌ನ್ನು ಸಂಪರ್ಕಿಸಬಹುದು.

| ಕ್ರ ಸಂ. | ಪರೀಕ್ಷಾ ಕೇಂದ್ರ | ಪರೀಕ್ಷಾ ಕೇಂದ್ರದ ವಿವರ | ಕೊ–ಆರ್ಡಿನೇಟರ್‌ಗಳ ಹೆಸರು | ಮೊಬೈಲ್ ನಂಬರ್ |
|---|---|---|---|---|
| 1 | **ಬೆಂಗಳೂರು** | ಬಂಟರ ಸಂಘ ಆರ್.ಎನ್.ಎಸ್. ವಿದ್ಯಾನಿಕೇತನ–I, ವಿಜಯನಗರ, ಬೆಂಗಳೂರು–40 | ಶ್ರೀ ನಿರಂಜನ್ ಶೆಟ್ಟಿ ಕೆ.<br>ಶ್ರೀ ಉಮೇಶ್ ಕುಮಾರ್ ಶೆಟ್ಟಿ<br>ಶ್ರೀಮತಿ ಹೀರಾ ಹೆಗ್ಡೆ | 96202 15965<br>97412 20559<br>961129 8055 |
| 2 | **ಬಂಟ್ವಾಳ** | ಬಂಟರ ಭವನ, ಬಂಟ್ವಾಳ | ಶ್ರೀಮತಿ ಶೋಭಾ ಶೇಖ<br>ಶ್ರೀ ಪ್ರಸಾದ್ ಕುಮಾರ್ ಶೆಟ್ಟಿ | 99018 85998<br>98457 20219 |
| 3 | **ಪುತ್ತೂರು** | ರಾಮಕೃಷ್ಣ ವಿದ್ಯಾನಿಕೇತನ ಶಾಲೆ, ಕೊಂಬೆಟ್ಟು, ಪುತ್ತೂರು | ಶ್ರೀಮತಿ ಜಯಶ್ರೀ ಸಿ. ರೈ.<br>ಶ್ರೀಮತಿ ಅನುಸೂಯ ಎಲ್. ಶೆಟ್ಟಿ | 99459 99255<br>98444 30362 |
| 4 | **ಬ್ರಹ್ಮಾವರ** | ಬೋರ್ಡ್ ಹೈಸ್ಕೂಲ್, ಪೊಲೀಸ್ ಸ್ಟೇಷನ್ ಹತ್ತಿರ, ಬ್ರಹ್ಮಾವರ | ಶ್ರೀ ಅಜಿತ್ ವಿ. ಶೆಟ್ಟಿ<br>ಶ್ರೀಮತಿ ಶಕುಂತಲಾ ಶೆಟ್ಟಿ | 97233 62444<br>93431 13902 |
| 5 | **ಬೈಂದೂರು** | ಬಂಟರ ಸಂಘ, ಬೈಂದೂರು | ಶ್ರೀ ರವೀಂದ್ರ ಶೆಟ್ಟಿ<br>ಶ್ರೀ ಪ್ರತಾಪ್ ಶೆಟ್ಟಿ | 99029 90244<br>99452 38259 |
| 6 | **ತೀರ್ಥಹಳ್ಳಿ** | ಬಂಟರ ಭವನ, ಕುವೆಂಪು ರಸ್ತೆ, ತೀರ್ಥಹಳ್ಳಿ | ಶ್ರೀ ಸಂತೋಷ್ ಕುಮಾರ್ ಶೆಟ್ಟಿ ಜೆ.<br>ಶ್ರೀ ರಮೇಶ್ ಜಿ. ಶೆಟ್ಟಿ | 98458 96655<br>96116 48717 |
| 7 | **ಬೆಳ್ತಂಗಡಿ** | ಬಂಟರ ಭವನ ಗುರುವಾಯನಕೆರೆ | ಶ್ರೀ ಉಮೇಶ್ ಪೂಂಜ ಡಿ.<br>ಶ್ರೀ ಯಶವಂತ್ | 94491 12306<br>87222 22071 |
| 8 | **ಕುಂದಾಪುರ** | ಆರ್.ಎನ್. ಶೆಟ್ಟಿ ಸಭಾಭವನ ಕುಂದಾಪುರ | ಶ್ರೀ ಅಜಿತ್ ಕುಮಾರ್ ಶೆಟ್ಟಿ ಕೆ.<br>ಶ್ರೀ ಸುನೀಲ್ ಕುಮಾರ್ ಶೆಟ್ಟಿ ಜೆ. | 96113 85957<br>98860 72580 |
| 9 | **ಕಾರ್ಕಳ** | ಬೋರ್ಡ್ ಹೈಸ್ಕೂಲು ಕಾರ್ಕಳ (ಮಾರಿಗುಡಿ ಹತ್ತಿರ) | ಶ್ರೀ ಸಂತೋಷ್ ಕುಮಾರ್ ಶೆಟ್ಟಿ ಎಂ.<br>ಶ್ರೀ ಸುರೇಂದ್ರ ಶೆಟ್ಟಿ ಹಡಾಳಿ | 94803 33938<br>96203 86172 |

ಸಹಿ/–
**ವಿಜಯ್ ಜೆ. ಶೆಟ್ಟಿ ಹಾಲಾಡಿ**
ಗೌರವ ಕಾರ್ಯದರ್ಶಿ

ಸಹಿ/–
**ಸಿಎ. ಅಶೋಕ್ ಶೆಟ್ಟಿ ಎಂ.**
ಅಧ್ಯಕ್ಷರು

**ಆಡಳಿತ ಮಂಡಳಿ, ಪದಾಧಿಕಾರಿಗಳು ಮತ್ತು ಕಾರ್ಯಕಾರಿ ಸಮಿತಿ ಸದಸ್ಯರು ಬಂಟರ ಸಂಘ ಬೆಂಗಳೂರು**

**BUNTS'SANGHA BANGALORE**
No.324, Chord Road, Vijayanagar
Bangalore – 560 040,
Tel.: 080-23399323 / 23399635 / 23399636

| Applicant | Father | Mother |
|---|---|---|
| | | |

**To,**

The Hon. Secretary
Bunt's Sangha Bangalore

Sir/ **ಮಾನ್ಯರೇ,**

I/We request you to consider my application **free PUC Education / ಉಚಿತ ಪದವಿ ಪೂರ್ವ ಶಿಕ್ಷಣ ಯೋಜನೆಗೆ** ನನ್ನ ಅರ್ಜಿಯನ್ನು ಪರಿಗಣಿಸಲು ಮನವಿ.

| | | | | |
|---|---|---|---|---|
| 1.Name of the Applicant :ಅಭ್ಯರ್ಥಿಯ ಹೆಸರು | | | | |
| 2. Father Name : ತಂದೆಯ ಹೆಸರು | | | | |
| 3. Mother Name : ತಾಯಿಯ ಹೆಸರು | | | | |
| 4. Address & Mob./Tel. No/<br>ವಿಳಾಸ ಮತ್ತು ಮೊಬೈಲ್ ಮತ್ತು ದೂರವಾಣಿ ಸಂಖ್ಯೆ: | | | | |
| 5. Family particulars/ ಕುಟುಂಬ ಸದಸ್ಯರ ವಿವರ. | Name/ ಹೆಸರು | Occupation/ ಉದ್ಯೋಗ | Annual Income/ ವಾರ್ಷಿಕ ಆದಾಯ | Education/ ವಿದ್ಯಾರ್ಹತೆ |
| Father/ ತಂದೆ | | | | |
| Mother/ ತಾಯಿ | | | | |
| 6. Is the parents are members of Bunts Sangha Bangalore? / ತಂದೆ/ತಾಯಿ ಬೆಂಗಳೂರು ಬಂಟರ ಸಂಘದ ಸದಸ್ಯರೇ?<br>ಹೌದು/ yes<br>ಅಲ್ಲ/ No | If yes, Membership No. / ಹೌದಾದಲ್ಲಿ ಸದಸ್ಯತ್ವ ಸಂಖ್ಯೆ : | | | |
| 7. Present education details of the candidate / ಅಭ್ಯರ್ಥಿಯು ಪ್ರಸ್ತುತ ಪಡೆಯುತ್ತಿರುವ ಶಿಕ್ಷಣದ ವಿವರಗಳು | | | | |
| Class presently studying/ completed :<br>SSLC/ 10th CBSE/ 10th ICSE : | Marks in Midterm/ Preparatory | Name, address & contact nur of the Institution<br>ಶಿಕ್ಷಣ ಸಂಸ್ಥೆಯ ಹೆಸರು, ವಿಳಾಸ ಮತ್ತು ಸಂಪರ್ಕ ದೂರವಾಣಿ : | | |
| 8. Particulars of Course /Combination preferred<br>ಅಭ್ಯರ್ಥಿಯು ಸೇರಬಯಸುವ ವಿಭಾಗ | I PUC Science :<br>PCMB<br>PCMC<br>Please tick ☑ | I PUC Commerce<br>EBAC<br>EBAS<br>Please tick ☑ | | |
| 9. Selection of Sankalpa Exam Center<br>ಸಂಕಲ್ಪ ಪರೀಕ್ಷಾ ಕೇಂದ್ರದ ಆಯ್ಕೆ: | | | | |

| | |
|---|---|
| 10. Whether the student is physically handicapped/ ಅಭ್ಯರ್ಥಿಯು ಅಂಗವಿಕಲನೇ (if yes furnish detail/ ಹೌದಾದಲ್ಲಿ ವಿವರಗಳು) | |
| 11. Proficiency in sports or other curricular activities may be furnished with proof/ ಕ್ರೀಡೆ ಅಥವಾ ಇನ್ನಾವುದೇ ಕ್ಷೇತ್ರದಲ್ಲಿ ಸಾಧನೆಯ ದಾಖಲೆಗಳೊಂದಿಗೆ | |
| 12. Compassionate grounds under which you are eligible for this scheme/ ಯೋಜನೆಗೆ ಅರ್ಹರಾಗಲು ಅನುಕಂಪದ ಕಾರಣಗಳಿದ್ದಲ್ಲಿ | |

**DECLARATION**

The particulars furnished above are true& correct. / **ನಾವು ನೀಡಿದ ವಿವರಗಳು ಸತ್ಯ ಮತ್ತು ಸರಿಯಾಗಿದೆ.**

***Signature of Applicant*** ***Signature of Parent/Guardian***

ಅಭ್ಯರ್ಥಿಯ ಸಹಿ ಹೆತ್ತವರ/ ಪೋಷಕರ ಸಹಿ

**Student has to furnish the following along with the application/ ಅಭ್ಯರ್ಥಿಯು ಈ ಕೆಳಗಿನ ದಾಖಲೆಗಳನ್ನು ಅರ್ಜಿಯೊಂದಿಗೆ ಸಲ್ಲಿಸುವುದು.**

- Certified copy of BPL / Anthyodaya card of parents only /ಹೆತ್ತವರ ಬಿಪಿಎಲ್/ ಅಂತ್ಯೋದಯ ಕಾರ್ಡ್‌ನ ಧೃಢೀಕೃತ ಪ್ರತಿ.
- Certified copy of Aadhar Card and Residential address of Student & Parent/ ವಿದ್ಯಾರ್ಥಿ ಹಾಗೂ ತಂದೆ/ತಾಯಿಯ ಆಧಾರ್ ಕಾರ್ಡ್ ಧೃಢೀಕೃತ ಪ್ರತಿ ಮತ್ತು ಮನೆಯ ವಿಳಾಸದ ವಿವರ.
- Certified copy of the marks card of the preparatory examination (Midterm/ Preparatory/ Final)/ಮುಖ್ಯೋಪಾಧ್ಯಾಯರ ಧೃಢೀಕೃತ ಸಹಿಯಿರುವ ಪೂರ್ವಸಿದ್ಧತಾ ಪರೀಕ್ಷೆಯ ಅಂಕಪಟ್ಟಿಯನ್ನು ಕಡ್ಡಾಯವಾಗಿ ಲಗತ್ತಿಸತಕ್ಕದ್ದು.
- ಅಭ್ಯರ್ಥಿಗಳು ಪರೀಕ್ಷೆ ಬರೆಯುವ ಪರೀಕ್ಷಾ ಕೇಂದ್ರದ ಹೆಸರನ್ನು ಅರ್ಜಿಯಲ್ಲಿ ಸ್ಪಷ್ಟವಾಗಿ ನಮೂದಿಸತಕ್ಕದ್ದು.
- ಬೆಂಗಳೂರು ಬಂಟರ ಸಂಘದ ಸದಸ್ಯತ್ವದ ಗುರುತಿನ ಚೀಟಿಯ ಪ್ರತಿ (ಸದಸ್ಯರಾಗಿದ್ದಲ್ಲಿ).
- Students have to pass the written exam/ವಿದ್ಯಾರ್ಥಿಗಳು ಲಿಖಿತ ಪರೀಕ್ಷೆಯಲ್ಲಿ ಕಡ್ಡಾಯವಾಗಿ ಉತ್ತೀರ್ಣ ಆಗಬೇಕು.
- Students interview will be conducted after the Bunts Sangha official visit to his/her residence/ ಉತ್ತೀರ್ಣ ಆದ ವಿದ್ಯಾರ್ಥಿಗಳ ಮನೆಗೆ ಬಂಟರ ಸಂಘದ ಪದಾಧಿಕಾರಿಗಳು ಭೇಟಿ ನೀಡಿ, ಮುಂದಿನ ಹಂತಕ್ಕೆ ಆಯ್ಕೆ ಮಾಡಲಾಗುವುದು.
- Photograph of Student and Parents in front of House / ಮನೆ ಮುಂದಿನ ವಿದ್ಯಾರ್ಥಿ ಮತ್ತು ಪೋಷಕರ ಭಾವಚಿತ್ರ.
- Selection shall be at the sole discretion of the Sangha / ಆಯ್ಕೆಯ ವಿಚಾರದಲ್ಲಿ ಸಂಘದ ತೀರ್ಮಾನವೇ ಅಂತಿಮ.
- Students selected under the scheme, shall follow the rules & regulations of the BSRNSV-II compulsorily / ಈ ಯೋಜನೆಗೆ ಆಯ್ಕೆಯಾದ ವಿದ್ಯಾರ್ಥಿಗಳು ಬಂಟರ ಸಂಘ ಆರ್.ಎನ್.ಎಸ್. ವಿದ್ಯಾನಿಕೇತನ–II ಇದರ ನಿಯಮಗಳು ಮತ್ತು ನಿಬಂಧನೆಗಳಿಗೆ ಕಡ್ಡಾಯವಾಗಿ ಬದ್ಧರಾಗಿರಬೇಕು.
- Application not duly filled is liable to be summarily rejected/ಅಪೂರ್ಣ ಅರ್ಜಿಗಳನ್ನು ತಿರಸ್ಕರಿಸಲಾಗುವುದು.
- Only the deserving candidates are requested to apply for this scheme / ಅರ್ಹ ಅಭ್ಯರ್ಥಿಗಳು ಮಾತ್ರ ಈ ಯೋಜನೆಗೆ ಅರ್ಜಿ ಸಲ್ಲಿಸಲು ಕೋರಲಾಗಿದೆ.

ದಾಂಪತ್ಯ ಜೀವನದ 25 ಅರ್ಥಪೂರ್ಣ ವರ್ಷಗಳನ್ನು ಪೂರೈಸಿದ ಶ್ರೀಯುತ ಎಸ್. ಪ್ರಶಾಂತ್ ಶೆಟ್ಟಿ ಮತ್ತು ಶ್ರೀಮತಿ ಶೈಲಜಾ ಪಿ. ಶೆಟ್ಟಿ ದಂಪತಿಗಳಿಗೆ ವೈವಾಹಿಕ 'ರಜತ ಮಹೋತ್ಸವ'ದ ಸಂಭ್ರಮಕ್ಕೆ ಹಾರ್ದಿಕ ಶುಭಾಷಯಗಳು. ಮುಂದಿನ ವರ್ಷಗಳು ಇನ್ನಷ್ಟು ಚೆಂದವಾಗಿರಲಿ. ನಿಮ್ಮ ಜೀವನ ಹಾಲು-ಜೇನಿನಂತೆ ಎಂದೆಂದಿಗೂ ಸುಮಧುರವಾಗಿರಲಿ. ನೂರಾರು ಕಾಲ ಸುಖವಾಗಿ ಬಾಳಿ. ನಿಮ್ಮ ಕನಸುಗಳೆಲ್ಲ ನನಸಾಗಲಿ. ದೇವರ ಕೃಪೆ ಸದಾ ನಿಮ್ಮೊಂದಿಗಿರಲಿ. ಯಶಸ್ಸು ನಿಮ್ಮದಾಗಲಿ.



**ಶ್ರೀ ಎಸ್. ಪ್ರಶಾಂತ್ ಶೆಟ್ಟಿ ಮತ್ತಿ ಶ್ರೀಮತಿ ಶೈಲಜಾ ಪಿ. ಶೆಟ್ಟಿ ದಂಪತಿಗಳು**

**ಶುಭ ಕೋರುವವರು :-**

ಶ್ರೀ ಅಜಿತ್ ಕುಮಾರ್ ಶೆಟ್ಟಿ ಕೆ.
ಶ್ರೀ ಪ್ರತಾಪ್ ಶೆಟ್ಟಿ ಡಿ. ಬಿ.
ಶ್ರೀ ರವೀಂದ್ರ ಶೆಟ್ಟಿ ಹಟ್ಟಿಯಂಗಡಿ
ಶ್ರೀ ಸುರೇಂದ್ರ ಶೆಟ್ಟಿ ಹಡಾಳಿ
ಶ್ರೀ ಅಜಿತ್ ವಿ. ಶೆಟ್ಟಿ
ಶ್ರೀ ರಮೇಶ್ ಜಿ. ಶೆಟ್ಟಿ
ಶ್ರೀ ಸುನೀಲ್ ಕುಮಾರ್ ಶೆಟ್ಟಿ ಜೆ.
ಶ್ರೀ ಉಮೇಶ್ ಕುಮಾರ್ ಶೆಟ್ಟಿ

ADVT.

# ಶ್ರದ್ಧಾಂಜಲಿ

| | |
|---|---|
|  ರಮೇಶ್ ಎನ್. ಶೆಟ್ಟಿ<br>ಸದಸ್ಯತ್ವ ಸಂಖ್ಯೆ: CL010457 | ಸಾಂತ್ಯ ದಿ. ನಾರಾಯಣ ಶೆಟ್ಟಿ ಮತ್ತು ಮಧ್ಯಗುತ್ತು ದಿ. ರಾಜೀವಿ ಇವರ ಪುತ್ರ ರಮೇಶ್ ಎನ್. ಶೆಟ್ಟಿಯವರು ದಿನಾಂಕ 20.03.2025 ರಂದು ತಮ್ಮ 71ನೇ ವಯಸ್ಸಿನಲ್ಲಿ ನಿಧನರಾದರು. ಇವರು ತಮ್ಮ ಪತ್ನಿ ಶ್ರೀಮತಿ ಸುನಂದಾ ಆರ್. ಶೆಟ್ಟಿ, ಇಬ್ಬರು ಪುತ್ರರು, ಸೊಸೆಯಂದಿರು, ಮೊಮ್ಮಗಳು, ಕುಟುಂಬಸ್ಥರು ಹಾಗೂ ಅಪಾರ ಬಂಧು-ಮಿತ್ರರನ್ನು ಅಗಲಿರುತ್ತಾರೆ. ಸಂಘದ ಸರ್ವ ಸದಸ್ಯರು ಇವರ ಆತ್ಮಕ್ಕೆ ಚಿರಶಾಂತಿ ಕೋರಿ ಸಂತಾಪ ಸೂಚಿಸಿರುತ್ತಾರೆ. |
|  ಸುಲೋಚನಾ ಜೆ. ಶೆಟ್ಟಿ<br>ಸದಸ್ಯತ್ವ ಸಂಖ್ಯೆ: CL005480 | ಅತ್ತೂರು ಮೂಡ್ರಗುತ್ತು ದಿ. ಶಂಭು ಶೆಟ್ಟಿ ಮತ್ತು ಮೂಡುಬಿದಿರೆ ಹಡಿಂಜಗುತ್ತು ದಿ. ಗುಲಾಬಿ ಶೆಟ್ಟಿ ಇವರ ಪುತ್ರಿ ಹಾಗೂ ಅತ್ತೂರು ಮೂಡ್ರಗುತ್ತು ಜಯ ಶೆಟ್ಟಿ ಇವರ ಧರ್ಮಪತ್ನಿಯಾದ ಸುಲೋಚನಾ ಜೆ. ಶೆಟ್ಟಿಯವರು ದಿನಾಂಕ 07.04.2025 ರಂದು ತಮ್ಮ 75ನೇ ವಯಸ್ಸಿನಲ್ಲಿ ನಿಧನರಾದರು. ಇವರು ಇಬ್ಬರು ಪುತ್ರರು, ಸೊಸೆಯಂದಿರು, ಮೂವರು ಮೊಮ್ಮಕ್ಕಳು, ಮೂವರು ಸಹೋದರಿಯರು, ಕುಟುಂಬಸ್ಥರು ಹಾಗೂ ಅಪಾರ ಬಂಧು-ಮಿತ್ರರನ್ನು ಅಗಲಿರುತ್ತಾರೆ. ಸಂಘದ ಸರ್ವ ಸದಸ್ಯರು ಇವರ ಆತ್ಮಕ್ಕೆ ಚಿರಶಾಂತಿ ಕೋರಿ ಸಂತಾಪ ಸೂಚಿಸಿರುತ್ತಾರೆ. |

## RTB Auditorium Booking Status as on 05.04.2025

| S. N. | Booking date | Prog. date | Party name | Booking Category | Prog. Details |
|---|---|---|---|---|---|
| | | | | Member/Non Member | |
| 1 | 03-03-2025 | 11-04-2025 | Kanthi Shetty | Member | Members |
| 2 | 03-03-2025 | 09-06-2025 | Sajani R Shetty | Member | Members |
| 3 | 03-03-2025 | 04-05-2025 | Ganganarasaiaah TM | N/A | Beegara Oota |
| 4 | 06-03-2025 | 17-03-2025 | Sachin Shetty | Member | Uttarakriye |
| 5 | 15-03-2025 | 21-09-2025 | Gana sourabha yakshagana trust school | N/A | Coastal Organizations |
| 6 | 17-03-2025 | 26-04-2025 | Krishnanayak herbalife | N/A | Social Service |
| 7 | 25-03-2025 | 12-04-2025 | Sixteen by sixty four media pvt ltd | N/A | Social Service |
| 8 | 30-03-2025 | 08-04-2025 | Satish N Shetty | Member | Uttarakriye |
| 9 | 30-03-2025 | 11-05-2025 | Sunil S | N/A | Beegara Oota |
| 10 | 01-04-2025 | 08-06-2025 | Chaya Devaraj R V | N/A | Beegara oota |
| 11 | 03-04-2025 | 24-08-2025 | Devanna Rai A | Member | Members |
| 12 | 04-04-2025 | 07-04-2025 | C Bhaskar Nayak | N/A | Social Service |
| 13 | 04-04-2025 | 09-05-2025 | C Bhaskar Nayak | N/A | Social Service |
| 14 | 04-04-2025 | 03-06-2025 | C Bhaskar Nayak | N/A | Social Service |
| 15 | 04-04-2025 | 14-07-2025 | C Bhaskar Nayak | N/A | Social Service |




ADVT.

IATA

# CANARA TOURS & TRAVELS PVT. LTD.

*.....Good people to travel with*

**Proudly announce 13 Night / 14 Days**
**Luxurious Pilgrimage - cum - Sight Seeing Tour to**

# Holy CHARDHAM



**YAMUNOTRI - GANGOTRI - KEDARNATH - BADRINATH**
**+**
**DEHRADUN - RISHIKESH - MUSSOORIE**

**EN ROUTE YOU WILL ALSO VISIT**

**HARIDWAR - UTTAR KASHI - GUPTA KASHI - GOURIKUND**
**RUDRA PRAYAG AND MANY OTHER HOLY PLACES**

## From 5th October to 18th October, 2025

Cost **Rs. 57500/-** Per person. Ex-New Delhi. Cost includes Transportation by luxurious super deluxe 22 Seater coach from Delhi to Delhi, 13 Nights stay in 'A' grade Hotels in Various Locations as per itinerary. Cost also includes Food - Bed Tea / Coffee, Breakfast, Lunch, Evening Snacks with Tea and Dinner. Pure South Indian Vegetarian Food Specially prepared for the group is served throughout the tour as our mobile kitchen will accompany the group. Cost does not include : Doli/Helicopter Charges if required at Kedarnath

**Group restricted to 22/44 only.**
**Hurry with your booking with 30% advance**

For any further details please contact:

IATA Approved

Canara Tours & Travels Pvt. Ltd
....... good people to travel with

**Mr. S. B. Shetty – 9820510043**
101, Udyog Kshetra, L.B.S. Marg, Off Link Road, Mulund (W), Mumbai-80. | Tel.: 41115000 | Fax : 41115005

**Mr. T. T. Mada – 9820632934**
2, Srishti Complex, Opp. L & T Gate No.7, Saki Vihar Rd., Powai, Mumbai-72. **Tel. : (022) 42215000**
**Fax : 91-22-28571468 E-mail : info@canaratravels.com | Website : www.canaratravels.com**

**Mr. Mohan - 9980248449**
G/3, Inland Ornate Opp. Ocean Pearl, Navabharath Circle, Kodialbail, Mangalore-575003 Tel.: 0824-4258505/06

**Mr. Prabhat Shetty - 9481950340**
204, Kirthi Sagar, Vidyaratnanagar Manipal - 576104

ADVT.

ಸ್ಥಾಪನೆ: 1997

ದೂರವಾಣಿ : 080-23393444
ಮೊಬೈಲ್ : 87220 06082

## ವಿಜಯ ಸೌಹಾರ್ದ ಕ್ರೆಡಿಟ್ ಕೋ ಆಪರೇಟಿವ್ ಸೊಸೈಟಿ ಲಿ.,

Vijaya Souharda Credit Co Operative Society Ltd.,

ನಂ.5, ಎಸ್.ಜೆ. ಎಲಿಗೆನ್ಸ್, 4ನೇ ಮಹಡಿ, ಚಂದ್ರ ಲೇಔಟ್ ಮುಖ್ಯ ರಸ್ತೆ, ಇನ್‌ಕಮ್ ಟ್ಯಾಕ್ಸ್ ಬಡಾವಣೆ, ವಿಜಯನಗರ ಬೆಂಗಳೂರು - 560040
E-mail : vijaya_souharda@yahoo.in , vijayasouharda@rediffmail.com

ಸಹಕಾರಿಯು ಸುಸ್ಥಿರ ಬೆಳವಣಿಗೆಯತ್ತ ಸಾಗುತ್ತಿದ್ದು, 27 ಸಂವತ್ಸರಗಳನ್ನು ಮುಗಿಸಿರುವುದು ಸಂತೋಷದಾಯಕ. ನಮ್ಮ ಸಹಕಾರಿಯು ನಿಶ್ಚಿತ ಠೇವಣಿಗಳಿಗೆ ಆಕರ್ಷಕ ಬಡ್ಡಿ ದರವನ್ನು ನೀಡಲಾಗುತ್ತಿದೆ. ಷೇರುದಾರರಿಗೆ ಆಕರ್ಷಣೀಯ ಡಿವಿಡೆಂಡ್ ನೀಡುತ್ತಿದ್ದೇವೆ. ಸಹಕಾರಿಯ ಸದಸ್ಯರಾಗುವ ಮೂಲಕ ವಿವಿಧ ಠೇವಣಿ, ಸಾಲ ಸೌಲಭ್ಯವನ್ನು ಪಡೆದುಕೊಳ್ಳಬಹುದು. ಪಿಗ್ಮಿ ಸಂಗ್ರಹಣಾ ವ್ಯವಸ್ಥೆ ಕಲ್ಪಿಸಲಾಗಿದೆ. ಹೊಸದಾಗಿ **01.09.2024 ರಿಂದ ಆವರ್ತ ಠೇವಣಿ (R.D)ಯನ್ನು ಪ್ರಾರಂಭಿಸಿದ್ದು ಹಣ ತೊಡಗಿಸಿದವರಿಗೆ ವಾರ್ಷಿಕ ಆಕರ್ಷಕ 8% ಬಡ್ಡಿ ನೀಡಲಾಗುವುದು.** ಸದಸ್ಯರು ಇವುಗಳ ಸದುಪಯೋಗವನ್ನು ಪಡೆದುಕೊಳ್ಳುವಂತೆ ಕೋರಲಾಗಿದೆ.

### ಸಾಲಗಳು

- ಜಾಮೀನು ಸಾಲ : ರೂ. 50,000.00 ದಿಂದ 2,00,000.00 ದವರೆಗೆ 24 ತಿಂಗಳಿನಿಂದ 36 ತಿಂಗಳವರೆಗೆ
- ವಾಹನ ಸಾಲ : 1 ಲಕ್ಷದಿಂದ 10 ಲಕ್ಷ – 24 ತಿಂಗಳಿನಿಂದ 36 ತಿಂಗಳವರೆಗೆ
- ವ್ಯಾಪಾರ ಸಾಲ : 1 ಲಕ್ಷದಿಂದ 20 ಲಕ್ಷ
- ಗೃಹ ನಿರ್ಮಾಣ ಸಾಲ ಮತ್ತು ನಿವೇಶನ ಖರೀದಿ ಸಾಲ: 1 ಲಕ್ಷದಿಂದ 60 ಲಕ್ಷ – 120 ತಿಂಗಳು ಗರಿಷ್ಠ ಅವಧಿ

**ಸಾಲದ ಬಡ್ಡಿ ದರ : 1 ಲಕ್ಷದವರೆಗೆ 14%, 1 ಲಕ್ಷ ಮೇಲ್ಪಟ್ಟು 13%**

2016–17 ರಿಂದ ಸತತವಾಗಿ 15% ಹಾಗೂ 2020 –2021 ರಲ್ಲಿ 12% ಮತ್ತು 2021 ರಿಂದ 2023 ರವರೆಗೆ 13%
ವಾರ್ಷಿಕ ಡಿವಿಡೆಂಡ್ ವಿತರಣೆ
ಪ್ರಗತಿಗೆ ಕೈ ಜೋಡಿಸಿ ಸಹಕಾರಿ ಕ್ಷೇತ್ರದಲ್ಲಿ ಅದ್ಭುತ ಸಾಧನೆಗೆ ಸಹಕರಿಸಿ

**ವ್ಯವಹಾರದ ವೇಳೆ :**

| | ಬೆಳಿಗ್ಗೆ | ಸಾಯಂಕಾಲ |
|---|---|---|
| ಸೋಮವಾರದಿಂದ ಶುಕ್ರವಾರದವರೆಗೆ | 9–30 ರಿಂದ 1–30 | 2–00 ರಿಂದ 6–00 |
| ಶನಿವಾರ | 9–30 ರಿಂದ 1–30 | ರಜಾ |
| ಭಾನುವಾರ | ವಾರದ ರಜಾ ದಿನ | |

**ನಿರ್ದೇಶಕರುಗಳು**

ಶ್ರೀ ಕೆ ಭಗವಾನ್ ದಾಸ್ ರೈ
ಶ್ರೀ ಡಿ ಚಂದ್ರಹಾಸ್ ರೈ
ಶ್ರೀ ಟಿ ಎನ್ ಶಿವಾನಂದ್ ಶೆಟ್ಟಿ
ಶ್ರೀಮತಿ ಸರ್ವಾಣಿ ಜಿ ರೈ
ಶ್ರೀ ಬಿ ಸಂತೋಷ್ ಕುಮಾರ್ ಶೆಟ್ಟಿ
ಶ್ರೀ ಕೆ ಪ್ರಮೋದ್ ಚಂದ್ರ ಭಂಡಾರಿ
ಶ್ರೀಮತಿ ಮಂಜುಳಾ ಎಸ್ ಶೆಟ್ಟಿ

**ಕಾರ್ಯದರ್ಶಿ – ಶ್ರೀಮತಿ ಶೋಭ ಆರ್**
**ಸ್ಥಾಪಕ ಅಧ್ಯಕ್ಷರು : ದಿ. ಡಾ॥ ಐ ವಿ ಶೆಟ್ಟಿ**

**ಶ್ರೀ ಇರ್ಮಾಡಿ ಜಯಪ್ರಸಾದ್ ಶೆಟ್ಟಿ**
ಅಧ್ಯಕ್ಷರು

**ಶ್ರೀ ಹೆಚ್ ಶ್ರೀಧರ್ ಹೆಗ್ಡೆ**
ಉಪಾಧ್ಯಕ್ಷರು

"ಸಹಕಾರಿಯ ಚಿತ್ತ ಪ್ರಗತಿ ಪಥದತ್ತ "

ADVT.

Shree Durgaparameshwari Educational Trust (Regd.)

# J S Pre-University College

(Recgd. by Govt. of Karnataka - College Code AS1005)

# J S Degree College

(Recgd. by Govt. of Karnataka & Affiliated to Bangalore University)

Topper Scorer 99%

Total State Ranks 45

#198, Balagangadhar Nagar, Kengunte, Near Dr. Ambedkar Engg. College Signal, Mallathahalli, Bengaluru-560056



*"An institution with the determination and commitment to materialize the desired objectives through brilliant academic brains".*

## PUC COURSES OFFERED

SCIENCE - PCMB, PCMCs
COMMERCE - BASCs, EBACs, EBAS
CET/NEET/JEE/NATA/CA-Foundation

## DEGREE COURSES OFFERED

B.Com & B.C.A.
Internship, Value Added Program,
Campus Placement Assistance, Industrial Visits

## II PUC STATE RANK HOLDERS : 2023-24

- 5th STATE RANK — KEERTHANA K SHANBHAG 99%
- 7th STATE RANK — RUTU S BHAT 98.1%
- 8th STATE RANK — ANANYA RAMESH 98%
- 8th STATE RANK — RACHANA KOTIYAN 98%
- 8th STATE RANK — RAMYA S 97.8%
- 8th STATE RANK — MONICA C 97.8%
- 9th STATE RANK — CHETHAN DURGADMATH 97.5%
- 10th STATE RANK — DISHA S 97.3%
- 11th STATE RANK — HARSHINI R 97.1%
- 11th STATE RANK — SOUJANYA PRABHU B 97.1%
- 12th STATE RANK — ARYAN KASHYAP 97.1%
- 12th STATE RANK — POOJA M 97%
- 12th STATE RANK — TANISHKA U 97%
- 12th STATE RANK — JATHIN B 97%
- 13th STATE RANK — PRAJNA N RAO 97%
- 14th STATE RANK — VIDYASHREE S 96.6%
- 14th STATE RANK — S KIRAN 96.8%
- 15th STATE RANK — RISHEEK R 96.5%
- 15th STATE RANK — CHIRAG PRABHU 96.5%
- 16th STATE RANK — THANUSHREE B R 96%
- 16th STATE RANK — RASHMITHA R 96.3%
- 17th STATE RANK — TRISHA P 95.8%
- 17th STATE RANK — SINCHANA M S 95.8%
- 17th STATE RANK — AASTHA SHARMA K M 95.8%
- 18th STATE RANK — GANGOTHRI H 95.5%
- 19th STATE RANK — ANANYA RAO C N 95.5%
- 19th STATE RANK — RACHANA BHASKAR GOWDA 95.5%
- 19th STATE RANK — KUSUM C 95.3%
- 19th STATE RANK — YOGITHA S 95.3%
- 20th STATE RANK — PRAJWAL N 95.1%
- 20th STATE RANK — RAKSHITHA M R 95.1%
- 20th STATE RANK — THANMAYEE M 95%
- 20th STATE RANK — ADARSH S 95.1%

**Enrol Now**
E-mail: info@jspuc.com
Website: www.jspuc.com



**Prof. Dr. Jayarama Shetty S.**
M.A., M.Ed., M.Sc., M.B.A., Ph.D., P.G.D.P.M.I.R., F.M.S.P.I., D.B.M.
Founder Director and Chairman

An epitome in the field of education. A renowned educationist, philanthropist and psychologist who has been a catalyst in many success stories. Dr. Shetty has been mentoring, guiding, counselling and nurturing students for over a period of four decades, both in Mangalore and Bangalore. He has been persistent in seeking remarkable results with ranks and distinctions by adopting innovative pedagogy.

**For more information on Admission Contact:**
Ph: 080-23218381
M: 8884666558

ADVT.

REGISTERED KA/BGW-1589/2021-2023 RNI No. : KARBIL/2005/16402, Date of Publication 07-04-2025.
Licenced post without prepayment License No.PMG BG /WPP-219/2021-2023, Total No.of Pages 20+4=24
Licensed to post at Bengaluru PSO, Mysuru Road, Bengaluru - 560026, on 10th or 12th of every Month




ADVT.

Printed and Published by : Sri Vijay J Shetty Halady. on behalf of Bunts' Sangha Bengaluru.
# 324, Bunts' Sangha Complex, Chord Road, Vijayanagar, Bengaluru - 560 040. Editor : Ravindra Shetty.
Printed at Poornima Printers, # 3 & 4, Sy. No. 51 / 14, Chowdeshwarinagar, Pipe Line Road, Laggere, Bengaluru - 58.
Phone : 080 - 23359588 | 23351210